ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ


SP NEWS
ಡಿಜಿಟಲ್ ನ್ಯೂಸ್ ಕಹಾನಿ

SURYA PRAGATHI Kannada daily
ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 Issue:146 Date:26-06-2026 Friday RNI NO : KARKAN/2021/80805 L2/RNP-1285/TMR/2025-27 Page :4 Price: 1.00
ಸಂಪುಟ: 05 ಸಂಚಿಕೆ: 146 ಪುಟ : 4 ಬೆಲೆ: 1.00 ರೂ

ಶಾಲಾ ಶಿಕ್ಷಣ ಇಲಾಖೆಯ ಮಹತ್ವದ ಪ್ರಗತಿ ಪರಿಶೀಲನಾ ಸಭೆ: ಕ್ಷೇತ್ರ ಮಟ್ಟದ ಸಮಸ್ಯೆಗಳಿಗೆ ಸ್ಥಳದಲ್ಲೇ ತಕ್ಷಣದ ಪರಿಹಾರ



ತುಮಕೂರು: ತುಮಕೂರು ಜಿಲ್ಲಾ ಪಂಚಾಯಿತಿಯ ಗೌರವಾನ್ವಿತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಅಶ್ವಿಜ ಬಿ.ವಿ., ಐ.ಎ.ಎಸ್. ಅವರ ಅಧ್ಯಕ್ಷತೆಯಲ್ಲಿ ತುಮಕೂರು ಮತ್ತು ಮಧುಗಿರಿ ಎರಡೂ ಶೈಕ್ಷಣಿಕ ಜಿಲ್ಲೆಗಳ ವ್ಯಾಪ್ತಿಯ 10 ತಾಲೂಕುಗಳ ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿನೂತನ ಪ್ರಗತಿ ಪರಿಶೀಲನಾ ಸಭೆಯು ಅತ್ಯಂತ ಯಶಸ್ವಿಯಾಗಿ ಜರುಗಿತು. ನಿಗದಿಪಡಿಸಿದ ಕಾರ್ಯಸೂಚಿಯಂತೆ (ಅಜೆಂಡಾ) ನಡೆದ ಈ ಸಭೆಯು, ಕ್ಷೇತ್ರ ಮಟ್ಟದಲ್ಲಿ ಹಾಗೂ ಶಾಲಾ ಹಂತದಲ್ಲಿ ಎದುರಾಗುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ಮುಕ್ತವಾಗಿ ಚರ್ಚಿಸಿ, ಸ್ಥಳದಲ್ಲೇ ಪರಿಹಾರ ಸೂಚಿಸುವ ಮೂಲಕ ಪ್ರಸಕ್ತ ಶೈಕ್ಷಣಿಕ ಸಾಲಿನ ಅತ್ಯುತ್ತಮ ಹಾಗೂ ಮಾದರಿ ಪ್ರಗತಿ ಪರಿಶೀಲನಾ ಸಭೆಯಾಗಿ ಮೂಡಿಬಂದಿದೆ.

ವೈಯಕ್ತಿಕ ಸಂವಹನ – ನೇರ ಪರಿಹಾರ: ಸಭೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ 250ಕ್ಕೂ ಹೆಚ್ಚು ಕ್ಷೇತ್ರ ಮಟ್ಟದ ಸಿಬ್ಬಂದಿ ಭಾಗವಹಿಸಿದ್ದರು. ಸಿಇಒ ಶ್ರೀಮತಿ ಅಶ್ವಿಜ ಬಿ.ವಿ. ಅವರು ಕೇವಲ ಅಧಿಕಾರಿಗಳಿಂದ ವರದಿ ಪಡೆಯದೇ, ಪ್ರತಿಯೊಬ್ಬ ಕ್ಷೇತ್ರ ಸಿಬ್ಬಂದಿಯೊಂದಿಗೆ ಪ್ರತ್ಯೇಕವಾಗಿ ಮತ್ತು ವೈಯಕ್ತಿಕವಾಗಿ ಸಂವಹನ ನಡೆಸಿದರು. ಶಾಲಾ ಮಟ್ಟದ ಪ್ರತಿಯೊಂದು ಸಮಸ್ಯೆಯನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡ ಅವರು, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಹಾಗೂ ಜಿಲ್ಲೆಯ ಶೈಕ್ಷಣಿಕ ಪ್ರಗತಿಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಮಹತ್ವದ ಮಾರ್ಗದರ್ಶನ ಮತ್ತು ಅಮೂಲ್ಯ ಸಲಹೆಗಳನ್ನು ನೀಡಿದರು. ಶಾಲಾ ಮಟ್ಟದ ಸಮಸ್ಯೆಗಳನ್ನು ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಸ್ಥಳದಲ್ಲೇ ಬಗೆಹರಿಸಿಕೊಡುವಲ್ಲಿ ಈ ಸಭೆಯು ಪ್ರಮುಖ ಪಾತ್ರ ವಹಿಸಿತು.

ಸುದೀರ್ಘ ಚರ್ಚೆ ನಡೆದ ಪ್ರಮುಖ ವಿಷಯಗಳು: ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಹಾಗೂ ಕಲ್ಯಾಣ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಸಭೆಯಲ್ಲಿ ಈ ಕೆಳಗಿನ ವಿಷಯಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ನಿರ್ದೇಶನ ನೀಡಲಾಯಿತು:

1. ವಿದ್ಯಾರ್ಥಿ ದಾಖಲಾತಿ ಮತ್ತು ಆಡಳಿತಾತ್ಮಕ ತಾಂತ್ರಿಕತೆ: ವಿದ್ಯಾರ್ಥಿಗಳ ಆಧಾರ್ ಕಾರ್ಡ್ ನವೀಕರಣ, ಆಧಾರ್ ಸೀಡಿಂಗ್ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ವಿತರಣೆ ಹಾಗೂ ಜನ್ಮ ದಿನಾಂಕ ಪ್ರಮಾಣ ಪತ್ರಗಳ ತಿದ್ದುಪಡಿಗೆ ಇರುವ ತೊಂದರೆಗಳನ್ನು ನಿವಾರಿಸುವುದು.
2. ವಿದ್ಯಾರ್ಥಿ ವೇತನ ಸಮಸ್ಯೆಗಳು: ಬಿಡಿ ಕಾರ್ಮಿಕರು ಹಾಗೂ ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನ ಸೇರಿದಂತೆ ವಿವಿಧ ಇಲಾಖೆಗಳಿಂದ ದೊರೆಯುವ ವಿದ್ಯಾರ್ಥಿ ವೇತನದ ಸಮಸ್ಯೆಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವುದು.
3. ಆರೋಗ್ಯ ಮತ್ತು ಸಾಮಾಜಿಕ ಯೋಜನೆಗಳು: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ನಶಾ ಮುಕ್ತ್ ಭಾರತ್ ಅಭಿಯಾನ್' ಪರಿಣಾಮಕಾರಿ ಅನುಷ್ಠಾನ ಹಾಗೂ 14 ವರ್ಷ ವಯಸ್ಸಿನ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ (ಅಜಡಿತುಭಿಚಿಟ ಅಚಿಟಿಛಿಜಡಿ ಗಿಚಿಛಿಛಿಟಿಚಿಣಚಿಟಿ) ಲಸಿಕಾಕರಣ ಅಭಿಯಾನದ ಪ್ರಗತಿ ಪರಿಶೀಲನೆ.
4. ಮೂಲಭೂತ ಸೌಕರ್ಯ ಮತ್ತು ಗುಣಮಟ್ಟದ ಶಿಕ್ಷಣ: ಶಾಲಾ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳ ವಿತರಣೆ, ಅತಿಥಿ ಶಿಕ್ಷಕರ ಯೋಜನೆ ಹಾಗೂ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸುವುದು.

ಅಂತರ–ಇಲಾಖಾ ಸಮನ್ವಯ ಹಾಗೂ ಅಧಿಕಾರಿಗಳ ಉಪಸ್ಥಿತಿ: ಶಾಲಾ ಮಟ್ಟದ ಸಮಸ್ಯೆಗಳಿಗೆ ತಕ್ಷಣದ ಪರಿಹಾರ ಒದಗಿಸಲು ಪೂರಕವಾಗಿ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಖುದ್ದಾಗಿ ಉಪಸ್ಥಿತರಿದ್ದು, ಅಗತ್ಯ ಮಾಹಿತಿ ಹಾಗೂ ಕ್ರಮಗಳ ಭರವಸೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಶ್ರೀ ಈಶ್ವರಯ್ಯ, ತುಮಕೂರು ಶೈಕ್ಷಣಿಕ ಜಿಲ್ಲೆಯ ಉಪ ನಿರ್ದೇಶಕರಾದ (ಆಆಕಖ) ಶ್ರೀ ಕೆ.ಜಿ. ರಘುಚಂದ್ರನ್, ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಉಪ ನಿರ್ದೇಶಕರಾದ ಶ್ರೀ ಮಾಧವರೆಡ್ಡಿ, ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಶ್ರೀ ಸಿದ್ದರಾಜು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ. ಮೋಹನ್ ಹಾಗೂ ಕಾರ್ಮಿಕ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದು, ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಕ್ಷೇತ್ರ ಸಿಬ್ಬಂದಿಯ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಇಲಾಖೆಗಳ ಸಮನ್ವಯದೊಂದಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಈ ಕ್ರಮಕ್ಕೆ ಇಲಾಖೆಯ ಅಧಿಕಾರಿಗಳು ಹಾಗೂ ಕ್ಷೇತ್ರ ಸಿಬ್ಬಂದಿ ವರ್ಗದವರು ವ್ಯಾಪಕ ಪ್ರಶಂಸೆ ಹಾಗೂ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ: ಮುಂಗಾರು ಸಿದ್ಧತೆ ಹಾಗೂ ಕುಡಿಯುವ ನೀರಿನ ಸ್ಥಿತಿಗತಿ ಪರಿಶೀಲನೆ



ತುಮಕೂರು: ಜಿಲ್ಲೆಯ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆಯಿರುವ ಗ್ರಾಮ ಹಾಗೂ ವಾರ್ಡ್‌ಗಳ ಸ್ಥಿತಿಗತಿ ಮತ್ತು ಕೈಗೊಂಡಿರುವ ಕ್ರಮಗಳ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಶುಭ ಕಲ್ಯಾಣ್ ಪರಿಶೀಲಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಪ್ರದೇಶಗಳ ಕುರಿತು ಅಗತ್ಯ ಮುನ್ನೆಚ್ಚರಿಕೆ ಹಾಗೂ ಸಿದ್ಧತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಕುಡಿಯುವ ನೀರಿನ ಮೂಲಗಳ ಪರೀಕ್ಷೆ, ಸ್ವಚ್ಛತೆ ಮತ್ತು ಕ್ಲೋರಿನೇಷನ್ ಪ್ರಗತಿ, 2026ನೇ ಸಾಲಿನ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆಯಿಂದ ಉಂಟಾದ ಹಾನಿ ಮತ್ತು ಪರಿಹಾರ ವಿತರಣೆಯ ವಿವರಗಳನ್ನು ಪರಿಶೀಲಿಸಿದ ಅವರು, ಮುಂಗಾರು ಹಂಗಾಮಿನಲ್ಲಿ ಸಂಭವಿಸಬಹುದಾದ ಅತಿವೃಷ್ಟಿ ಮತ್ತು ಅನಾವೃಷ್ಟಿ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಕೈಗೊಂಡಿರುವ ಪೂರ್ವಸಿದ್ಧತಾ ಕ್ರಮಗಳ ಕುರಿತು ಚರ್ಚಿಸಿದರು.

ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ವತಿಯಿಂದ ಬಿತ್ತನೆ ಪ್ರಗತಿ, ಬೆಳೆ ಸಮೀಕ್ಷೆ ಹಾಗೂ ಬೆಳೆ ವಿಮೆ ಯೋಜನೆಗಳ ಅನುಷ್ಠಾನದ ಬಗ್ಗೆ ಮಾಹಿತಿ ಪಡೆಯಲಾಯಿತು. ಹೋಬಳಿವಾರು ಮೇವು ಲಭ್ಯತೆ, ಜಿಲ್ಲಾ ವಿಪತ್ತು ಉಪಶಮನ ನಿಧಿ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ, ಜಿಲ್ಲೆಯ ಹವಾಮಾನ ಮತ್ತು ಮಳೆ ಮಾಪನ ಕೇಂದ್ರಗಳ ಕಾರ್ಯನಿರ್ವಹಣೆ ಕುರಿತು ಪರಿಶೀಲನೆ ನಡೆಸಿದರು.

ಹೋಬಳಿ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಗ್ರಾಮ ಮತ್ತು ವಾರ್ಡ್‌ಗಳಿಗೆ ನೀಡಿರುವ ಭೇಟಿ ವಿವರಗಳು, ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿ ಸಭೆಗಳ ಪ್ರಗತಿ ಹಾಗೂ ತಹಶೀಲ್ದಾರರ ಪಿಡಿ ಖಾತೆಗಳಲ್ಲಿ ಲಭ್ಯವಿರುವ ಅನುದಾನ ಮತ್ತು ಹೆಚ್ಚುವರಿ ಅನುದಾನದ ಬೇಡಿಕೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ವಿಡಿಯೋ ಸಂವಾದದ ಮೂಲಕ ಸಭೆಯಲ್ಲಿ ಭಾಗವಹಿಸಿ ಅಗತ್ಯ ಮಾಹಿತಿಯನ್ನು ಪ್ರಸ್ತುತಪಡಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಹಾಗೂ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.



ಶಕ್ತಿಸೌಧಕ್ಕೆ ಕುವೆಂಪು ಪುತ್ರಿ ಭೇಟಿ

ತುಮಕೂರು: ತುಮಕೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಕಚೇರಿ ಶಕ್ತಿಸೌಧಕ್ಕೆ ರಾಷ್ಟ್ರಕವಿ ಕುವೆಂಪು ಅವರ ಪುತ್ರಿ ಪಿ. ತಾರಿಣಿ ಹಾಗೂ ಅಳಿಯ ಪ್ರೊ. ಚಿದಾನಂದಗೌಡರು ಗುರುವಾರ ಸೌಜನ್ಯದ ಭೇಟಿ ನೀಡಿದ್ದರು.

ಪುರಸಭೆಯ ಸಿಬ್ಬಂದಿ ದಲ್ಲಾಳಿ ಏಜೆಂಟ್‌ಗಳನ್ನು ಇಟ್ಟುಕೊಂಡು ಸಾರ್ವಜನಿಕರಿಂದ ಹಣ ವಸೂಲಿ; ಶಾಸಕ ಕೆ.ಎನ್. ರಾಜಣ್ಣ ಅಸಮಾಧಾನ



ಮಧುಗಿರಿ : ಪುರಸಭೆಯ ಸಿಬ್ಬಂದಿ ದಲ್ಲಾಳಿ ಏಜೆಂಟ್‌ಗಳನ್ನು ಇಟ್ಟುಕೊಂಡು ಸಾರ್ವಜನಿಕರಿಂದ ಹಣ ವಸೂಲು ಮಾಡುತ್ತಿದ್ದಾರೆ ಎಂಬ ಆರೋಪಗಳು ಕೇಳಿ ಬರುತ್ತಿವೆ ಎಂದು ಶಾಸಕ ಕೆ.ಎನ್. ರಾಜಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ಪುರಸಭಾ ಕಛೇರಿಯ ಸಭಾಂಗಣದಲ್ಲಿ ಸಾರ್ವಜನಿಕರ ದೂರುಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ನಿಮ್ಮ ಕೆಲಸ ನೀವು ಅಚ್ಚುಕಟ್ಟಾಗಿ ಮಾಡಿದರೆ ಜನ ಏಕೆ ನಮ್ಮ ಬಳಿ ದೂರು ಹೇಳುತ್ತಾರೆ. ಕಚೇರಿಗೆ ಬರುವ ಸಾರ್ವಜನಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಿ ಅವರ ಕೆಲಸ ಮಾಡಿಕೊಡಿ. ನಿಮ್ಮಿಂದಾಗಿ ಜನತೆ ನಮ್ಮ ಬಗ್ಗೆ ತಪ್ಪು ತಿಳಿಯುವಂತಾಗಿದೆ. ಇಲ್ಲಿನ ಸಿಬ್ಬಂದಿ ದಲ್ಲಾಳಿಗಳನ್ನು ಇಟ್ಟುಕೊಂಡು ಹಣ ವಸೂಲು ಮಾಡುತ್ತಿದ್ದಾರೆ ಎಂಬ ದೂರುಗಳಿವೆ. ಯಾವುದೇ ಕಾರಣಕ್ಕೂ ದಲ್ಲಾಳಿಗಳನ್ನು ಕಚೇರಿಗೆ ಸೇರಿಸುವಂತಿಲ್ಲ. ಮುಂದಿನ ದಿನಗಳಲ್ಲಿ ಯಾವುದೇ ದೂರು ಬರದಂತೆ ನೋಡಿಕೊಳ್ಳಿ. ಮತ್ತೆ ದೂರು ಬಂದರೆ ಜಿಲ್ಲಾಧಿಕಾರಿಗಳನ್ನು ಕರೆಸಿ ಸಭೆ ಮಾಡಿ ಪುರಸಭೆ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಾಧಿಕಾರಿ ಸುರೇಶ್ ಅವರಿಗೆ ಸೂಚನೆ ನೀಡಿದರು.

ತುಕ್ಕು ಹಿಡಿದಿರುವ ಟ್ಯಾಂಕರ್‌ನಲ್ಲಿ ನೀರು ಸರಬರಾಜು ಮಾಡುತ್ತಿದ್ದೀರಾ ಎಂಬ ದೂರುಗಳಿವೆ. ಈ ನೀರು ಬಳಸಿ ಯಾರಾದರೂ ವಾಂತಿ ಬೇಧಿಯಿಂದ ಅಸ್ವಸ್ಥರಾದರೆ ಏನು ಗತಿ? ಆದಷ್ಟು ಬೇಗ ಟ್ಯಾಂಕರ್ ಬದಲಾಯಿಸಿ ಎಂದು ಸೂಚಿಸಿದರು

ಪುರಸಭೆಯ ಅಂಗಡಿ ಮಳಿಗೆಗಳನ್ನು ನಿಯಮಾವಳಿ ಪ್ರಕಾರ ಹಂಚಿಕೆ ಮಾಡಿಲ್ಲ. ಇದರಿಂದ ಬಹಳಷ್ಟು ಜನರಿಗೆ ಮತ್ತು ದಲಿತರಿಗೆ ಅನ್ಯಾಯವಾಗಿದೆ ಎಂದು ಸಾರ್ವಜನಿಕರೊಬ್ಬರು ಕೆಎನ್‌ಆರ್ ಗಮನಕ್ಕೆ ತಂದಾಗ

ಪುರಸಭೆ ಮಾಜಿ ಅಧ್ಯಕ್ಷ ಲಾಲಾಪೇಟೆ ಮಂಜುನಾಥ್ ಮತ್ತು ಪುರಸಭೆ ಮುಖ್ಯಾಧಿಕಾರಿ ಮಾಹಿತಿ ನೀಡಿ, ಡಿಸಿಯವರು ಯಾವ ಕ್ಯಾಟಗರಿ ಮೇಲೆ ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಿ ಎಂದು ಸೂಚನೆ ನೀಡಿದ್ದಾರೋ ಅದರ ಆಧಾರದ ಮೇಲೆ ಅಂಗಡಿ ನೀಡಿದ್ದೇವೆ ಎಂದು ಶಾಸಕರ ಗಮನಕ್ಕೆ ತಂದರು,

"ನಿಮಗೆ ಅಂಗಡಿ ನೀಡಿಲ್ಲ ಎಂದರೆ ಬೇರೆ ದಲಿತರಿಗೆ ಅಂಗಡಿ ನೀಡಿಲ್ಲವಾ? ಎಸ್.ಸಿ, ಎಸ್.ಟಿಗಳಿಗೆ ಯಾವ ನಿಯಮದಡಿ ಅಂಗಡಿ ನೀಡಬೇಕು ಎಂಬುದು ಇದೆಯೋ ಅದರ ಆಧಾರದ ಮೇಲೆ ಅಂಗಡಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿಂದೆ ಅಂಗಡಿಗಳನ್ನು ಪಡೆದಿರುವವರನ್ನು ಏಕಾಏಕಿ ಖಾಲಿ ಮಾಡಿ ಎಂದರೆ ಇಷ್ಟು ದಿನ ಅಂಗಡಿಗಳನ್ನೇ ನಂಬಿಕೊಂಡು ಇಲ್ಲಿ ಜೀವನ ನಡೆಸುತ್ತಿರುವವರ ಗತಿ ಏನಾಗಬೇಡ? ನಾಳೆ ನಿಮ್ಮ ಪರಿಸ್ಥಿತಿಯೂ ಇದೇ ರೀತಿ ಆದರೆ ಏನು ಮಾಡುತ್ತೀರಾ" ಎಂದು ಕೆಎನ್‌ಆರ್ ಯುವಕನನ್ನು ಪ್ರಶ್ನಿಸಿದರು.

ಸಭೆಯಲ್ಲಿ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಹಶೀಲ್ದಾರ್ ಮಂಜುನಾಥ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಯೋಗಾನಂದ, ತಾ. ಪಂ ಇಒ ಬಿಕೆ ಉತ್ತಮ್, ಸಹಾಯಕ ನಿರ್ದೇಶಕ ಧನಂಜಯ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಎ.ಆರ್ ಸಿ ಎಸ್ ಓಬಳೇಶಪ್ಪ, ಪುರಸಭೆ ಮಾಜಿ ಅಧ್ಯಕ್ಷರಾದ ಎಂ.ಕೆ ನಂಜುಂಡಯ್ಯ, ಲಾಲಾಪೇಟೆ ಮಂಜುನಾಥ್, ಕೆ. ಪ್ರಕಾಶ್, ಗೋವಿಂದರಾಜು, ಪುರಸಭೆ ಮಾಜಿ ಸದಸ್ಯರು, ಸಾರ್ವಜನಿಕರು ಇದ್ದರು.

ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ: ಜಿಲ್ಲಾಧಿಕಾರಿಗಳಿಂದ ಜಾಗೃತಿ ಪೋಸ್ಟರ್ ಬಿಡುಗಡೆ



ತುಮಕೂರು: ಭಾರತವು ಪೋಲಿಯೋ ಮುಕ್ತ ರಾಷ್ಟ್ರವೆಂದು ಘೋಷಿಸಲ್ಪಟ್ಟಿದ್ದರೂ, ಕೆಲವು ದೇಶಗಳಲ್ಲಿ ಇನ್ನೂ ಪೋಲಿಯೋ ಪ್ರಕರಣಗಳು ಕಂಡುಬರುತ್ತಿದ್ದು, ಸೋಂಕು ಮರುಕಳಿಸುವ ಸಾಧ್ಯತೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳಿಗೆ ಪ್ರತಿ ಸುತ್ತಿನಲ್ಲೂ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ದೇಶದ ಪೋಲಿಯೋ ಮುಕ್ತ ಸ್ಥಾನಮಾನವನ್ನು ಕಾಪಾಡುವಲ್ಲಿ ತಮ್ಮ ಕೊಡುಗೆ ನೀಡಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಕರೆ ನೀಡಿದರು.


ಜೂನ್ 28, 2026ರಂದು ಜಿಲ್ಲೆಯಾದ್ಯಂತ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಅಂಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸಿದ್ಧಪಡಿಸಲಾದ ಪೋಸ್ಟರ್ ಅನ್ನು ಗುರುವಾರ ಜಿಲ್ಲಾಧಿಕಾರಿಗಳು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ॥ ಚಂದ್ರಶೇಖರ್ ಹಾಗೂ ಆರೋಗ್ಯ ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಕಲಿ ದಾಖಲೆ ಸೃಷ್ಟಿಸಿದ ಆರು ಜನರ ವಿರುದ್ಧ ಅಮೃತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ನಕಲಿ ದಾಖಲೆ ಸೃಷ್ಟಿಸಿದ ಆರು ಜನರ ವಿರುದ್ಧ ಅಮೃತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು, ಆರೋಪಿಗಳನ್ನು ಬಂಧಿಸುವಂತೆ ಭೂಮಾಲಿಕ ಚಿಕ್ಕಣ್ಣ ಒತ್ತಾಯ.


THE BHARATIYA NYAYA SANHITA (BNS), 2023(ಗ/–318(4),329(3),352,351(2),190)



ರಿತ್ಯ ಪ್ರಕರಣ ದಾಖಲು

ತುಮಕೂರು ತಾಲ್ಲೂಕು, ಹೆಬ್ಬೂರು ಹೋಬಳಿ. ಕೋಡಿಪಾಳ್ಯ ಗ್ರಾಮದಲ್ಲಿ ವಾಸವಾಗಿರುವ

ಚಿಕ್ಕರಾಮಯರವರ ಮಗ ಸುಮಾರು 51 ವರ್ಷದ ಚಿಕ್ಕಣ್ಣರವರು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ಕುಣಿಗಲ್ ತಾಲ್ಲೂಕು ಯಡೆಯೂರು ಹೋಬಳಿಯ ಯಲ್ಲಾಪುರದ ಲೋಕೇಶ್ ಮತ್ತು ಆತನ ಮಗ ಸತೀಶ ಇವರ ಮೈನರ್ ಬೆ. ಗಾರ್ಡಿಯನ್ ಆಗಿ ಖಾಸಾ ತಂದೆ ಯಲಾಪುರ ಗ್ರಾಮದಲ್ಲಿ ವಾಸವಾಗಿರುವ ಹೆಂಜಾರಯ್ಯ ರವರ 2 ನೇ ಮಗ ಸುಮಾರು 47 ಸತೀಶ ನನಗೆ ದಿನಾಂಕ: 20–01–2007 ರಂದು ಯಡೆಯೂರು ಹೋಬಳಿ, ಮದುರೆ ಕಾವಲ್ ಗ್ರಾಮದ ಸರ್ವೇ ನಂಬರ್ 1/ಪಿ–ಪಿ 44 ಒಟ್ಟು ವಿಸ್ತೀರ್ಣ 4 ಎಕರೆ ಜಮೀನನು ನನಗೆ ಶುದ್ಧ ಕ್ರಯಕ್ಕೆ ಬರೆದುಕೊಟ್ಟಿರುತ್ತರೆ ಸದರಿ ಕ್ರಯ ಪತ್ರದಂತೆ ಅಂದಿನಿಂದ ಇಂದಿನವರೆವಿಗೂ ನಾನೇ ಶಾಂತಿಯುತವಾಗಿ ಅನುಭವದಲಿರುತ್ತೆನೆ ಹಾಗೂ ಎಲ್ಲಾ ರೆವಿನ್ಯೂ ದಾಖಲೆಗಳು ನನ್ನ ಹೆಸರಿನಲಿ ಇರುತ್ತವೆ ಲೋಕೇಶನು ನನಗೆ ಕ್ರಯ ಮಾಡಿಕೊಟ್ಟಿರುವ ವಿಚಾರ ಗೊತ್ತಿದ್ದರೂ ಸಹ ಬೆಂಗಳೂರಿನ ರಾಜಾಜಿನಗರ 4 ನೇ ಬಾಕ್ 3 ನೇ ಮುಖ್ಯ ರಸ್ತೆ, ನಂಬರ್ 804 ರಲ್ಲಿ ವಾಸವಾಗಿರುವ ರಂಗಪ್ಪ ರವರ ಮಗ ಆರ್ ಇಂದ್ರೇಶ್ ರವರಿಗೆ :–27–11–2014 ರಂದು ನೊಂದಾಯಿತವಲ್ಲದ ಕ್ರಯದ ಕರಾರು ಪತ್ರವನ್ನು ದುರುದ್ದೇಶಪೂರ್ವಕವಾಗಿ ಬರೆದುಕೊಟ್ಟು ನಂತರ ಇಂದ್ರೇಶನಿಂದ ಕುಣಿಗಲ್ ನ ಗೌರವಾನಿತ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಮೂಲ ದಾವಾ ಸಂಖ್ಯೆ 33/2015 ರ ರೀತ ಪ್ರಕರಣ ದಾಖಲಿಸಿ ನಂತರ ಲೋಕೇಶ್, ಗಂಗಮ್ಮ, ಪುಟ್ಟಮ್ಮ ಮತ್ತು ರತ್ನಮ್ಮ ರವರು ಘನ ನ್ಯಾಯಾಲಯದಲ್ಲಿ ರಾಜಿ 'ಮಾಡಿಕೊಂಡಿರುತ್ತಾರೆ ನಂತರ ಮೇಲ್ಕಂಡ ಗಂಗಮ್ಮ, ಲಕ್ಕಮ್ಮ ಪುಟ್ಟಮ್ಮ ರವರುಹಾಗು ಲೋಕೇಶ್ ನನ್ನ ವಿರುದ್ಧ ವಿಭಾಗಕ್ಕಾಗಿ ದಾವಾ ಸದರಿ ದಾವಾ ಸಂಖ್ಯೆ 328/2018 ರಲ್ಲಿ ಹೂಡಿದ್ದು, ಸದರಿ ದಾವೆಯು ವಜಾ ಆಗಿರುತ್ತದೆ ನಂತರ ಮೇಲ್ಕಂಡವರುಗಳೆಲ್ಲರೂ ಗೌರವಾನ್ವಿತ ತುಮಕೂರಿನ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನನಗೆ ಆಗಿರುವ ಎಂ.ಆರ್ ಹೆಚ್–14/2016–17 ನ್ನು ರದ್ದು ಪಡಿಸುವಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮ ಮನವಿಯೂ ಸಹ ವಜಾಗೊಂಡಿರುತ್ತೆ ಈ ಮಧ್ಯೆ ಲೋಕೇಶನು ಇಂದ್ರೇಶನ ಜೊತೆ ಶಾಮಿಲಾಗಿ ನನ್ನ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಸದರಿ ದಾಖಲೆಗಳ ಆಧಾರದ



ಮೇಲೆ ಮೇಲ್ಕಂಡ ಎಲ್ಲಾ ಆಸಾಮಿಗಳು ದಿನಾಂಕ: 10–06–2026 ರಂದು ಮಧ್ಯಾಹ್ನ 2–30 ಗಂಟೆಯ 3) ಸಮಯದಲ್ಲಿ ಏಕಾಏಕಿ ನಮ್ಮ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ನಮ್ಮನ್ನು ಕುರಿತು ಅವಾಚ್ಯ 'ಶಬ್ದಗಳಿಂದ ಬೈದು ನನಗೆ ರೌಡಿಗಳು ಗೊತ್ತು ಹಣ ಬಲ ಮತ್ತು ರಾಜಕೀಯ ಬಲವಿದೆ ನಿನ್ನನ್ನು ಈ ದಿನವೇ ಒಂದು ಗತಿ ಕಾಣಿಸುತ್ತೇವೆ ಎಂದು ಬೆದರಿಕೆ ಹಾಕಿದರು ಆಗ ನಾನು ಅವರಿಂದ ತಪ್ಪಿಸಿಕೊಂಡು ಬಂದೆನು, ಲೋಕೇಶನಿಗೆ 2007 ರಲ್ಲಿ ಕ್ರಯ ಮಾಡಿಕೊಟ್ಟಿರುವ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಲೋಕೇಶ ಹಾಗೂ ಅವರ ಕುಟುಂಬದವರಾದ ಗಂಗಮ್ಮ, ಪುಟ್ಟಮ್ಮ, ರತ್ನಮ್ಮ, ಶಶಿಧರ ಎಲ್ಲರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನನಗೆ ವಂಚಿಸಿರುತ್ತಾರೆ ಆದ್ದರಿಂದ ಮೇಲ್ಕಂಡ ಆಸಾಮಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕುಣಿಗಲ್ ತಾಲೂಕು ಅಮೃತೂರು ಪೊಲೀಸ್ ಠಾಣೆಗೆ ದೂರು ನೀಡಿರುವುದಾಗಿ ತಿಳಿಸಿದರು .

ಸರ್ವಮಂಗಳ ನಾಗಯ್ಯ ಸರ್ಕಾರಿ ಶಾಲೆಗೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ವೈ.ಎಸ್.ಸಿಂಧು ನೇಮಕ



ತುಮಕೂರು; ಜಿಲ್ಲೆಯ ಗ್ರಾಮಾಂತರ ತಾಲ್ಲೂಕಿನ ಕೋರಾ ಗ್ರಾಮದ ಸರ್ವಮಂಗಳ ನಾಗಯ್ಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ಯ ಶಾಲಾ ಅಭಿವೃದ್ಧಿ ಅಧ್ಯಕ್ಷರಾಗಿ ಗ್ರಾಮದ ವೈ.ಎಸ್.ಸಿಂಧು ಅವರು ನೇಮಕವಾಗಿದ್ದು ಶಾಲೆಯ ಶೈಕ್ಷಣಿಕ ಪ್ರಗತಿಗೆ ಶ್ರಮಿಸುವುದಾಗಿ ತಿಳಿಸಿದ್ದಾರೆ.

ಶಾಲೆಯಲ್ಲಿ ನಡೆದ ಸರಳ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಸ್ ಡಿ ಎಂ ಸಿ ಅಧ್ಯಕ್ಷರಾದ ಸಿಂಧು ಮಾತನಾಡುತ್ತ ಕಾಲ ಕಾಲಕ್ಕೆ ಸರ್ಕಾರದ ಅದೇಶದಂತೆ ಶಾಲೆಯ ಶಿಕ್ಷಕರು ಶ್ರಮಿಸಬೇಕಿದೆ ಅದರಂತೆ ಗ್ರಾಮದ ಪೋಷಕರು ಶಾಲಾ ಅಭಿವೃದ್ಧಿ ಸಮಿತಿಯ ಎಲ್ಲಾ ಪದಾಧಿಕಾರಿಗಳ ಸಹಕಾರವೂ ದೊರೆಯಲಿದೆ ಎಂದರು.

ಇದೇ ವೇಳೆ ಎಸ್ ಡಿಎಂಸಿ ಉಪಾಧ್ಯಕ್ಷರಾಗಿ ರವಿಚಂದ್ರ, ಸದಸ್ಯರುಗಳಾಗಿ ಗುರು ಬಸವಣ್ಣ,ಯತೀಶ್, ಸುಮಿತ್ರಾ, ಶಿವರಾಜು, ಸಹನಾ, ಮಂಜುಳಾ,ಫೈರೋಜ್, ನೂರುನ್ನಿಸಾ, ಸುಕನ್ಯಾ, ಚಂದ್ರಕಲಾ, ಪವಿತ್ರ, ಶೈಲಾಜ, ಚಂದ್ರಶೇಖರ್, ಸಿದ್ದರಾಜು,ಮಹೇಶ್, ನರಸಿಂಹಮೂರ್ತಿ ಅವರುಗಳು ಆಯ್ಕೆಯಾದರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕರಾದ ಶೈಲಾಜ, ಸಹಶಿಕ್ಷಕರಾದ ಶಶಿಕಲಾ,ಸೀತಾಲಕ್ಷ್ಮೀ, ವಿಶ್ವನಾಥ್, ಸಿದ್ದರಾಮಕ್ಕ,ಹರೀಶ್, ಸುಮ, ಸೌಮ್ಯ, ರವೀಶ್ ಸೇರಿದಂತೆ ಗ್ರಾಮಸ್ಥರು ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೀಸಲು ಬದಲಾದರೆ 2028ಕ್ಕೆ ಕೊರಟಗೆರೆ ಕ್ಷೇತ್ರದಿಂದ ಸ್ಪರ್ಧೆ: ಪಿಎನ್‌ಕೆ ಸುಳಿವು



ಕೊರಟಗೆರೆ : ಕೋಳಾಲ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಪಿ.ಎನ್ ಕೃಷ್ಣಮೂರ್ತಿ ಅವರು ಮಾವತ್ತೂರು ಕ್ರಾಸ್‌ನ ವಿಶ್ವ ಭಾರತಿ ಪ್ರೌಢಶಾಲೆಯಲ್ಲಿ ಗುರುವಾರ ನಡೆದ ಶಾಲಾ ಸಮವಸ್ತ್ರ, ಕ್ರೀಡಾ ಸಾಮಾಗ್ರಿ ವಿತರಣೆ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ವಿದ್ಯಾರ್ಥಿಗಳ ಚಪ್ಪಾಳೆ, ಹರ್ಷೋದ್ಗಾರದ ನಡುವೆ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, "ಸಮಾಜ ಸೇವೆ ಮಾಡುತ್ತಿರುವುದು ಅಧಿಕಾರದ ಆಸೆಗಲ್ಲ. ನಾನು ಬಡತನದಲ್ಲಿ ಬೆಳೆದವನು. ತಂದೆ–ತಾಯಿ ಹಾಕಿಕೊಟ್ಟ ಪ್ರಾಮಾಣಿಕ ದಾರಿಯಲ್ಲಿ ನಡೆಯುತ್ತಿದ್ದೇನೆ. ಈ ಕ್ಷೇತ್ರದ ಮಕ್ಕಳು ಶಿಕ್ಷಣದಲ್ಲಿ ಪ್ರಗತಿ ಸಾಧಿಸಿ ಉನ್ನತ ಹುದ್ದೆಗೆ ಏರಬೇಕು ಎಂಬುದೇ ನನ್ನ ಆಸೆ" ಎಂದು ಹೇಳಿದರು. ಮುಂದುವರಿದು ಮಾತನಾಡಿದ ಪಿಎನ್‌ಕೆ, "ಎಲೆರಾಂಪುರ ಮತ್ತು ಸುದ್ದರಬೆಟ್ಟ ಪ್ರೌಢಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಇಂದು ವಿಶ್ವ ಭಾರತಿ ಪ್ರೌಢಶಾಲೆಯ 100 ಮಂದಿ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಕ್ರೀಡಾ ಕಿಟ್ ವಿತರಿಸಿದ್ದೇನೆ. ಮುಂದಿನ ದಿನಗಳಲ್ಲಿ ಕೋಳಾಲ ಹೋಬಳಿಯ 1800 ಮಂದಿ ವಿದ್ಯಾರ್ಥಿಗಳಿಗೆ ಹಂತ ಹಂತವಾಗಿ ತಲುಪಿಸುವ ಗುರಿ ಹೊಂದಿದ್ದೇನೆ. 2028ರಲ್ಲಿ ನಿಮ್ಮೆಲ್ಲರ ಮನಸ್ಸು, ವಿಶ್ವಾಸ ಗಳಿಸಿ ಚುನಾವಣೆಯಲ್ಲಿ ಗೆದ್ದು ಈ ಕ್ಷೇತ್ರದ ಪ್ರತಿ ಮನೆಯ ಮಗನಾಗಿ ನಿಂತು ಅಭಿವೃದ್ಧಿಗೆ ಶ್ರಮಿಸಲಿದ್ದೇನೆ" ಎಂದು ತಿಳಿಸಿದರು.

2028ರ ಚುನಾವಣೆಗೆ ಸಿದ್ಧತೆ

ಎಸ್‌ಸಿ ಮೀಸಲು ಕೊರಟಗೆರೆ ವಿಧಾನಸಭಾ ಕ್ಷೇತ್ರವು ಮೀಸಲಾತಿ ಬದಲಾದರೆ ತಾವು ಕೊರಟಗೆರೆಯಿಂದ ಸ್ಪರ್ಧಿಸುವುದಾಗಿ ಪಿ.ಎನ್ ಕೃಷ್ಣಮೂರ್ತಿ ಸುಳಿವು ನೀಡಿದರು. "ನಾನು ಈ ಕ್ಷೇತ್ರದ ಮನೆ ಮಗ. ನನ್ನ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿ ಜನ ಆಶೀರ್ವದಿಸಬೇಕು" ಎಂದು ಕೋರಿದರು.

ಉದ್ಯಮಿ ಪರಮೇಶ್ ಮಾತನಾಡಿ, "ಪಿಎನ್‌ಕೆ ಅವರ ಜೊತೆ 4 ದಶಕಗಳ ಒಡನಾಟ. ಕೋವಿಡ್ ಸಂದರ್ಭದಲ್ಲಿ ನಿರಾಶ್ರಿತರಿಗೆ ನಿತ್ಯ ಅನ್ನದಾನ, ಸರ್ಕಾರಿ ಶಾಲೆ, ದೇವಸ್ಥಾನ, ಸಮುದಾಯ ಭವನಗಳ ಅಭಿವೃದ್ಧಿ ಕಾರ್ಯಗಳು ಜನಮನ್ನಣೆ ಪಡೆದಿವೆ" ಎಂದರು.

ಮಾವತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್ ಮಾತನಾಡಿ, "ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಪಿ.ಎನ್ ಕೃಷ್ಣಮೂರ್ತಿ ಸದಾ ನೆರವಾಗುತ್ತಿದ್ದಾರೆ. ಅರಸೀಕ್ಷರಿ ಸಮುದಾಯ ಭವನ ಅಭಿವೃದ್ಧಿಗೊಂಡಿದ್ದು ಶೀಘ್ರ ಲೋಕಾರ್ಪಣೆಯಾಗಲಿದೆ. ಸುದ್ದರಬೆಟ್ಟದಲ್ಲಿ 1.5 ರಿಂದ 2 ಕೋಟಿ ವೆಚ್ಚದ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಅವರು ಭರವಸೆ ನೀಡಿದ್ದಾರೆ" ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮಾವತ್ತೂರು ಗ್ರಾಪಂ ಉಪಾಧ್ಯಕ್ಷ ನವೀನ್, ಎಸ್.ಆರ್ ರಾಜಣ್ಣ, ಮುಖಂಡ ಶಿಕ್ಷಕ ಮಂಜುಳಾ, ಮಂಜಣ್ಣ, ಕುಮಾರಣ್ಣ, ಮುತ್ತಯ್ಯ, ರಾಜಣ್ಣ, ರಂಗನಾಥ್, ಕುಮಾರ್, ಮಹಾಲಿಂಗಪ್ಪ, ಶಂಕರ್, ಮೂರ್ತಿ, ಹನುಮಂತರಾಜು, ರಾಜು, ರಾಜರೆಡ್ಡಿ, ಮಂಜು, ವಜ್ರನಕುಂಟೆ ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಕರಿಬಸವಯ್ಯ, ಲಿಂಗಾಪುರ ನರಸಿಂಹರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

_ಹೈಲೈಟ್ಸ್:_

– *ವಿತರಣೆ:* ಮೊದಲ ಹಂತದಲ್ಲಿ ವಿಶ್ವ ಭಾರತಿ ಪ್ರೌಢಶಾಲೆಯ 100 ವಿದ್ಯಾರ್ಥಿಗಳಿಗೆ ವಿತರಣೆ. ಕೋಳಾಲ ಹೋಬಳಿಯ ಒಟ್ಟು 1800 ವಿದ್ಯಾರ್ಥಿಗಳಿಗೆ ಹಂತ ಹಂತವಾಗಿ ವಿತರಣೆಯ ಗುರಿ.

– *ಭರವಸೆ:* ಸುದ್ದರಬೆಟ್ಟದಲ್ಲಿ 2 ಕೋಟಿ ವೆಚ್ಚದ ಕಲ್ಯಾಣ ಮಂಟಪ ನಿರ್ಮಾಣ.

– *ರಾಜಕೀಯ:* ಮೀಸಲಾತಿ ಬದಲಾದರೆ 2028ಕ್ಕೆ ಕೊರಟಗೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ.

ತೆಂಗಿನಕಾಯಿ ಕೀಳುವ ವೇಳೆ ವಿದ್ಯುತ್ ಸ್ಪರ್ಶ;ಯುವಕನ ದಾರುಣ ಸಾವು



ತೋಟದಲ್ಲಿ ತೆಂಗಿನಕಾಯಿ ಕೀಳುವ ವೇಳೆ ವಿದ್ಯುತ್ ತಂತಿಗೆ ರೋಟಿ ತಗುಲಿ, ತಂದೆಯ ಕಣ್ಣಿಂದೆಯೇ ಮಗ ಮೃತಪಟ್ಟ ಹೃದಯವಿದ್ರಾವಕ ಘಟನೆ ಗುಬ್ಬಿ ತಾಲ್ಲೂಕಿನ ಕಡಬ ಹೋಬಳಿಯ ಕುಣಾಘಟ್ಟ ಗ್ರಾಮದಲ್ಲಿ ನಡೆದಿದೆ. ಮೃತ ಯುವಕನನ್ನು ಪ್ರೀತಂ (19) ಎಂದು ಗುರುತಿಸಲಾಗಿದೆ. ಪ್ರೀತಂ ತುಮಕೂರಿನ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದು, ರಜೆ ಹಿನ್ನೆಲೆ ಊರಿಗೆ ಬಂದಿದ್ದನು ಎಂದು ತಿಳಿದುಬಂದಿದೆ.

ತೋಟದಲ್ಲಿ ತೆಂಗಿನಕಾಯಿ ಕೀಳುವ ಸಂದರ್ಭದಲ್ಲಿ ಬಳಸುತ್ತಿದ್ದ ರೋಟಿ ಆಕಸ್ಮಿಕವಾಗಿ ತೋಟದ ಮೇಲೆ ಹಾದುಹೋಗಿದ್ದ ವಿದ್ಯುತ್ ತಂತಿಗೆ ತಗುಲಿದೆ. ಪರಿಣಾಮ ಪ್ರೀತಂಗೆ ತೀವ್ರ ವಿದ್ಯುತ್ ಶಾಕ್ ತಗುಲಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಮೂಲಗಳು ತಿಳಿಸಿವೆ. ಮಗನನ್ನು ಕಳೆದುಕೊಂಡ ಕುಟುಂಬದ ಆಕ್ರಂದನ ಗ್ರಾಮಸ್ಥರ ಮನಕಲಕುವಂತಿತ್ತು. ಇತ್ತೀಚಿನ ದಿನಗಳಲ್ಲಿ ಇಂತಹ ಅವಘಡಗಳು ಹೆಚ್ಚಾಗುತ್ತಿದ್ದರೂ, ತೋಟಗಳಲ್ಲಿ ಕೆಲಸ ಮಾಡುವ ವೇಳೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಲ್ಲಿ ನಿರ್ಲಕ್ಷ್ಯ ಕಂಡುಬರುತ್ತಿದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ತೋಟಗಳ ನಡುವೆ ಹಾದುಹೋಗುವ ವಿದ್ಯುತ್ ತಂತಿಗಳ ಬಗ್ಗೆ ಬೆಸ್ಕಾಂ ಅಧಿಕಾರಿಗಳು ಹೆಚ್ಚಿನ ಎಚ್ಚರಿಕೆ ವಹಿಸಿ, ರೈತರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಮೃತದೇಹವನ್ನು ಗುಬ್ಬಿ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಈ ಸಂಬಂಧ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಉಚಿತ ಕಿವಿ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣಾ ಶಿಬಿರ ಪತ್ರಕರ್ತರು ಸದುಪಯೋಗಪಡಿಸಿಕೊಳ್ಳಲು ಜಿಲ್ಲಾಧ್ಯಕ್ಷ ಎಲ್.ಯೋಗೇಶ್ ಮನವಿ

ತುಮಕೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ತುಮಕೂರು ಜಿಲ್ಲಾ ಘಟಕ), ರೋಟರಿ ತುಮಕೂರು ಪ್ರೇರಣಾ, ಇನ್ನರ್ ವೀಲ್ ಕ್ಲಬ್ ತುಮಕೂರು ಹಾಗೂ 'ಟೀಮ್ ಈಶ್ವರ್ ಮಲ್ಲೆ' ಅವರ ಸಂಯುಕ್ತ ಆಶ್ರಯದಲ್ಲಿ ಸಾರ್ವಜನಿಕರಿಗಾಗಿ ಉಚಿತ ಕಿವಿಯ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರವಣದೋಷದಿಂದ ಬಳಲುತ್ತಿರುವ ಜನರಿಗೆ ನೆರವಾಗುವ ನಿಟ್ಟಿನಲ್ಲಿ ಈ ವಿಶೇಷ ಶಿಬಿರವನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರು ಹಾಗೂ ಪತ್ರಕರ್ತರು ಇದರ ಸದುಪಯೋಗ ಪಡಿಸಿಕೊಳ್ಳಬೇಕಾಗಿ ಕೋರಲಾಗಿದೆ.

ದಿನಾಂಕ: 27–06–2026 (ಶನಿವಾರ) ಮತ್ತು 28–06–2026 (ಭಾನುವಾರ) ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 5:00 ಗಂಟೆಯವರೆಗೆ ಗುಬ್ಬಿ ವೀರಣ್ಣ ಕಲಾಕ್ಷೇತ್ರದ ಪಕ್ಕದಲ್ಲಿರುವ ಪತ್ರಿಕಾ ಭವನದಲ್ಲಿ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಮೊದಲು ನೋಂದಾಯಿಸಿಕೊಳ್ಳುವ 40 ಜನರಿಗೆ ಶ್ರವಣ ಯಂತ್ರ (Hearing Machine) ಅಗತ್ಯವಿರುವ ರೋಗಿಗಳಿಗೆ ತಗಲುವ ಒಟ್ಟು ವೆಚ್ಚದಲ್ಲಿ ಶೇಕಡಾ 40 ರಷ್ಟು ಮೊತ್ತವನ್ನು 'ಟೀಮ್ ಈಶ್ವರ್ ಮಲ್ಲೆ' ಅವರ ವತಿಯಿಂದ ಭರಿಸಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಹೆಸರು ನೋಂದಣಿಗಾಗಿ ಸಂಪರ್ಕಿಸಿ: ಮೊಬೈಲ್ / ವಾಟ್ಸಾಪ್ ಸಂಖ್ಯೆ: +91 8951804399

ಸಂಪರ್ಕಿಸಬಹುದಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಎಲ್.ಯೋಗೇಶ್ ತಿಳಿಸಿದ್ದಾರೆ.







'ಬಯಲು ಸೀಮೆ ರಂಗಾಯಣ' ಮಂಜೂರು ಮಾಡಿ



ರಾಜ್ಯ ಸರ್ಕಾರ ಯಕ್ಷ ರಂಗಾಯಣವನ್ನು ಕರಾವಳಿ ರಂಗಾಯಣವನ್ನಾಗಿ ಬದಲಾಯಿಸಿದ್ದು ಸ್ವಾಗತಾರ್ಹ. ಹಾಗೆಯೇ ತುಮಕೂರಿಗೆ 'ಬಯಲು ಸೀಮೆ ರಂಗಾಯಣ'ವನ್ನು ಮಂಜೂರು ಮಾಡಬೇಕೆಂದು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಉಗಮ ಶ್ರೀನಿವಾಸ್ ತಿಳಿಸಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ಶಿವಮೊಗ್ಗ, ಮೈಸೂರು, ಧಾರವಾಡ, ಕಲ್ಬುರ್ಗಿ, ಕಾರ್ಕಳ ಹಾಗೂ ದಾವಣಗೆರೆಯಲ್ಲಿ ರಂಗಾಯಣವಿದ್ದು ಬೆಂಗಳೂರಿನಲ್ಲಿ ಮತ್ತೊಂದು ರಂಗಾಯಣ ಸ್ಥಾಪಿಸಲು ಅವಕಾಶವಿದೆ. ಆದರೆ ಬೆಂಗಳೂರಿನಲ್ಲಿ ಈಗಾಗಲೇ ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ ಇರುವುದರಿಂದ ಬೆಂಗಳೂರಿನ ಭವಿಷ್ಯದ ಉಪನಗರಿ ತುಮಕೂರಿನಲ್ಲಿ 'ಬಯಲು ಸೀಮೆ ರಂಗಾಯಣ' ಮಂಜೂರು ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಪ್ರಯೋಗಾತ್ಮಕ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿರುವ ಹಾಗೂ ಪೌರಾಣಿಕ ರಂಗಭೂಮಿಯಲ್ಲಿ ತುಮಕೂರು ಮುಂಚೂಣಿಯಲ್ಲಿದೆ. ಜಾನಪದ, ಬುಡುಕಟ್ಟಿನ ಶ್ರೀಮಂತ ಸಂಸ್ಕೃತಿ ತುಮಕೂರಿನಲ್ಲಿದೆ. ಗುಬ್ಬಿ ವೀರಣ್ಣ, ಮಾಸ್ಟರ್ ಹಿರಣ್ಣಯ್ಯ ಮುಂತಾದ ರಂಗ ದಿಗ್ಗಜರಿಗೆ ಜನ್ಮ ಕೊಟ್ಟ ನಾಡು ತುಮಕೂರಾಗಿದೆ. ಅಲ್ಲದೇ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಶ್ರೀಮಂತ ರಂಗ ಇತಿಹಾಸವಿದೆ. ಈ ಹಿನ್ನೆಲೆಯಲ್ಲಿ ತುಮಕೂರಿಗೆ 'ಬಯಲು ಸೀಮೆ ರಂಗಾಯಣ' ಮಂಜೂರು ಮಾಡಬೇಕೆಂದು ಉಗಮ ಶ್ರೀನಿವಾಸ್ ಮನವಿ ಮಾಡಿದ್ದಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರ



ತಿಪಟೂರು : ನಗರದ ರೋಟರಿ ಕ್ಲಬ್ ಹಾಗೂ ಅಶ್ವಿನಿ ಜುವೆಲರ್ಸ್ ಬೆಳ್ಳಿ ಹಬ್ಬದ ಸಂಭ್ರಮದ ಪ್ರಯುಕ್ತ ಸಾರ್ವಜನಿಕರಿಗಾಗಿ ಬೃಹತ್ ಉಚಿತ ಸೂಪರ್ ಸ್ಪೆಷಾಲಿಟಿ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಗರಸಭೆ ಆಯುಕ್ತರಾದ ವಿಶ್ವೇಶ್ವರ ಭದರಗಡೆ ಅವರು, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಕರೆ ನೀಡಿದರು. ಈ ಕುರಿತು ಒಂದು ವಿಶೇಷ ವರದಿ.

ತಿಪಟೂರಿನ ರೋಟರಿ ಕ್ಲಬ್ ಹಾಗೂ ಅಶ್ವಿನಿ ಜುವೆಲರ್ಸ್ 25ನೇ ವರ್ಷದ ವಾರ್ಷಿಕೋತ್ಸವದ (ಬೆಳ್ಳಿ ಹಬ್ಬ) ಅಂಗವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಉಚಿತ ಸೂಪರ್ ಸ್ಪೆಷಾಲಿಟಿ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ಪ್ರಮುಖರು ಹಾಗೂ ವೈದ್ಯರು ಜಂಟಿಯಾಗಿ ದೀಪ ಬೆಳಗಿಸುವ ಮೂಲಕ ಈ ಜನಪದ ಕಲ್ಯಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಗರಸಭೆ ಆಯುಕ್ತರಾದ ವಿಶ್ವೇಶ್ವರ ಭದರಗಡೆ ಅವರು, ಇಂದಿನ ಜಂಜಾಟದ ಜೀವನದಲ್ಲಿ ಆರೋಗ್ಯದ ಕಾಳಜಿ ಎಷ್ಟು ಮುಖ್ಯ ಎಂಬುದನ್ನು ಸವಿಸ್ತಾರವಾಗಿ ವಿವರಿಸಿದರು. ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ, ಬರುವ ಮುನ್ನವೇ ಮುಂಜಾಗ್ರತೆ ವಹಿಸುವುದು ಉತ್ತಮ ಎಂದು ಅವರು ಸಾರ್ವಜನಿಕರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪ್ರಮುಖ ವೈದ್ಯರಾದ ಡಾ. ಶ್ರೀಧರ್ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ ಮತ್ತು ಆಹಾರ ಪದ್ಧತಿಯಿಂದಾಗಿ ಸಣ್ಣ ವಯಸ್ಸಿನಲ್ಲೇ ಅನೇಕ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಹೀಗಾಗಿ ಪ್ರತಿಯೊಬ್ಬರೂ ವರ್ಷಕ್ಕೊಮ್ಮೆಯಾದರೂ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಮತ್ತು ದೈನಂದಿನ ಜೀವನದಲ್ಲಿ ಉತ್ತಮ ಆರೋಗ್ಯ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ನೂರಾರು ಸಾರ್ವಜನಿಕರು ಪಾಲ್ಗೊಂಡು ತಜ್ಞ ವೈದ್ಯರಿಂದ ಉಚಿತ ತಪಾಸಣೆ ಹಾಗೂ ಸಲಹೆಗಳನ್ನು ಪಡೆದುಕೊಂಡರು.

ಈ ಸಂದರ್ಭದಲ್ಲಿ ರೋಟರಿ ಕ್ಲಬ್ ಅಧ್ಯಕ್ಷರಾದ ವನಿತಾ ಪ್ರಸನ್ನ, ಭಾವಿ ಅಧ್ಯಕ್ಷ ಪ್ರಕಾಶ್ ಸೇರಿದಂತೆ ರೋಟರಿ ಸಂಸ್ಥೆಯ ಪದಾಧಿಕಾರಿಗಳು, ಅಶ್ವಿನಿ ಜುವೆಲರ್ಸ್ ಸಿಬ್ಬಂದಿ ಹಾಜರಿದ್ದರು

ವೀರಸೌಧ ಕಟ್ಟಡದಲ್ಲಿ ಕಾನೂನು ಸೇವಾ ಕೇಂದ್ರ ಉದ್ಘಾಟನೆ



ತುಮಕೂರು: ನಗರದ ಜೆ.ಸಿ.ರಸ್ತೆಯಲ್ಲಿರುವ ವೀರಸೌಧ ಕಟ್ಟಡದಲ್ಲಿ ಇಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲಾ ಸೈನಿಕರು, ಮಾಜಿ ಯೋಧರು ಮತ್ತು ಅವಲಂಬಿತರ ಸಮಿತಿಯ ಸಹಯೋಗದಲ್ಲಿ ಕಾನೂನು ಸೇವಾ ಕೇಂದ್ರದ ಉದ್ಘಾಟನೆ ಮತ್ತು ವೀರ ಪರಿವಾರ ಸಹಾಯತ ಯೋಜನೆ ಬಗ್ಗೆ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ತುಮಕೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಲೋಕೇಶ ಧನಪಾಲ ಹವಲೆ ವಹಿಸಿ ಮಾತನಾಡುತ್ತಾ ಯೋಧರು ಮತ್ತು ಯೋಧರ ಕುಟುಂಬದ ಅವಲಂಬಿತರಿಗೆ ಕಾನೂನು ಸೇವೆಗಳ ಕುರಿತಾಗಿ ವಿವರಣೆ ಮತ್ತು ಅದರಿಂದ ಯಾವ ರೀತಿಯಾದ ಸೌಲಭ್ಯಗಳನ್ನು ಪಡೆಯುವುದರ ಕುರಿತಾಗಿ ವಿವರಣೆಯನ್ನು ನೀಡಿದರು.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಗೋಪಾಲ್ ರವರು ದೇಶದಲ್ಲಿನ ಸೈನಿಕರ ಪಾತ್ರದ ಕುರಿತು ಮಾತನಾಡುತ್ತಾ ಸೈನಿಕರು ಹಗಲು ರಾತ್ರಿ, ಮಳೆ ಚಳಿ ಬಿಸಲು ಎನ್ನದೇ ನಮ್ಮ ದೇಶದ ಗಡಿಯನ್ನು ಕಾಯುತ್ತಿರುತ್ತಾರೆ ಅದೂ ಅಲ್ಲದೇ ಪ್ರಕೃತಿ ವಿಕೋಪಗಳು ಸಂಭವಿಸಿದಾಗಲೂ ಸಹ ಸೈನಿಕರ ಪಾತ್ರ ಅತ್ಯಂತ ಮಹತ್ತರವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ, ದೇಶದ ರಕ್ಷಣೆ ಅವರಿಗೆ ಮೊದಲು ಆದ್ಯತೆಯಾಗಿರುತ್ತದೆ, ಅಂತಹ ಸೈನಿಕರು ಮತ್ತು ಅವರ ಕುಟುಂಬಕ್ಕೆ ಸಮಾಜದ ಕಾನೂನಿನ ಕುರಿತಾದ ಅರಿವು ಮೂಡಿಸುವುದು ಮತ್ತು ಕಾನೂನಿನ ಸೌಲಭ್ಯಗಳನ್ನು ಒದಗಿಸಿಕೊಡುವುದು ನಮ್ಮ ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ಇಲಾಖೆಯ ಜವಾಬ್ದಾರಿಯಾಗಿದೆ ಅದರಂತೆ ನಾವು ಸಹ ಅವರುಗಳಿಗೆ ಆದ್ಯತೆಯ ಮೇರೆಗೆ ಅವರು ಮತ್ತು ಅವರ ಕುಟುಂಬದವರ ನೆರವಿಗೆ ಬರುತ್ತಿದ್ದೇವೆ, ಅಲ್ಲದೇ ಅವರುಗಳಿಗೆ ಕಾನೂನಿನ ಸೇವೆಗಳ ಬಗ್ಗೆ ಅರಿವು ಮೂಡಿಸುವುದರ ಸಲುವಾಗಿ ಇಂದು ಆಯೋಜಿಸಿರುವ ಕಾರ್ಯಕ್ರಮವು ಅತ್ಯಂತ ಪ್ರಶಂಸನೀಯ ಕಾರ್ಯಕ್ರಮವಾಗಿದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 4 ಕರ್ನಾಟಕ ಎನ್.ಸಿ.ಸಿ. ಬೆಟಾಲಿಯನ್ ಉಪ ಕಮಾಂಡೆಂಟ್ ಆದ ಲೆಫ್ಟಿನೆಂಟ್ ಕರ್ನಲ್ ಎಸ್. ಅಭಿಲಾಷ್, , ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಉಮೇಶ್ ಚಂದ್ರ ಎನ್. ಆರ್, ಸೈನಿಕ ಕಲ್ಯಾಣ ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರಾದ ಮೇಜರ್ ಬಾಲಸುಬ್ರಹ್ಮಣ್ಯಂ, ಜಿಲ್ಲಾ ಮಾಜಿ ಸೈನಿಕರ ಸಮನ್ವಯ ಸಮಿತಿಯ ಜಿಲ್ಲಾಧ್ಯಕ್ಷರಾದ ಬೊಮ್ಮಲಿಂಗಣ್ಣ, ಕಾರ್ಯದರ್ಶಿ ವಿ.ಡಿ.ನಾಗರಾಜ್, ಡಾ|| ಹಿರೇಮಠ್, ಕರ್ನಲ್ ಗಿರೀಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಮ ಮಂದಿರ ಮತ್ತು ಸಮುದಾಯಭವನ ಉದ್ಘಾಟನೆ



ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಗ್ರಾಮದಲ್ಲಿ ಶ್ರೀ.ರಾಮಮಂದಿರ ಹಾಗೂ ಶ್ರೀಮತಿ ಚಂದ್ರಾವತಿ ಡಾ.ಸಿದ್ದೇಗೌಡ ಚೌಡೀಪುರ ರವರ ಸಮುದಾಯ ಭವನವನ್ನು ಶ್ರೀ.ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಅವರು ಉದ್ಘಾಟನೆ ಮಾಡಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀ. ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಮಾತನಾಡಿ ಶ್ರೀರಾಮನ ಬದುಕು ವ್ಯಕ್ತಿತ್ವ, ಆದರ್ಶ ಮತ್ತು, ಹಿರಿಯರನ್ನು ಗೌರವಿಸುವ ಹಾಗೂ ಆರಾಧಿಸುವ ಮೂಲಕ ಯುವಕರು ಸಹಾ ರಾಮನಂತೆ ಶಕ್ತಿಯುತರಾಗಿ ಬುದ್ಧಿಶಾಲಿಗಳಾಗಬೇಕು ಎಂದರು.

ಹನೂರು ಮಾಜಿ ಶಾಸಕರಾದ ಆರ್ .ನರೇಂದ್ರರವರು ಮಾತನಾಡಿ ಸತ್ತೇಗಾಲ ಗ್ರಾಮ ಕಾವೇರಿ ನದಿಯ ಪಕ್ಕದಲ್ಲಿರುವ ಒಂದು ಪವಿತ್ರವಾದ ಗ್ರಾಮ , ಈ ಗ್ರಾಮದ ಸುತ್ತಮುತ್ತ ದೇವಾಲಯಗಳಿಂದ ಕೂಡಿದೆ ಕಳೆದ ಅವಧಿಯಲ್ಲಿ ಮಾಸ್ತ್ಯರಂಗ ದೇವಾಲಯಕ್ಕೆ 4 ಕೋಟಿ ಅನುದಾನವನ್ನು ಹಾಕಿ ಕೊಟ್ಟಿದ್ದೆ ಅದರಲ್ಲಿ ಮದ್ಯ ರಂಗ ದೇವಾಲಯ ಹಾಗೂ ಅಮ್ಮನವರ ದೇವಾಲಯ ಅಭಿವೃದ್ಧಿ ಕೆಲಸಗಳು ನಡೆದು ಕಳೆದ ತಿಂಗಳು ಮುಖ್ಯಮಂತ್ರಿಗಳಾದ ಡಿ ಕೆ ಶಿವಕುಮಾರ್ ರವರು ಆಗಮಿಸಿ ಉದ್ಘಾಟನೆ ಮಾಡಿದ್ದಾರೆ , ಗುತ್ತಿಗೆದಾರರಾದ ಮಹೇಶ್ ರೆಡ್ಡಿಯವರು ಕೂಡ ದೇವಾಲಯ ಅಭಿವೃದ್ಧಿಗೆ ಸ್ವಂತ ಹಣವನ್ನು ಕೊಟ್ಟು ದೇವಾಲಯವನ್ನು ಸುಂದರವಾಗಿ ನಿರ್ಮಾಣ ಮಾಡಿದ್ದಾರೆ ದೇವಾಲಯದ ಮುಂಭಾಗ ಗೋಪುರವು ಕೂಡ ಸುಂದರವಾಗಿ ನಿರ್ಮಾಣ ಮಾಡಿಸಿಕೊಟ್ಟಿದ್ದಾರೆ.

ಅದೇ ರೀತಿ ಈ ದಿನ ಸತ್ತೇಗಾಲ ಗ್ರಾಮದಲ್ಲಿ ರಾಮ ಮಂದಿರ ಹಾಗೂ ಸಮುದಾಯ ಭವನವನ್ನು ಉದ್ಘಾಟನ ಮಾಡಲಾಗಿದೆ ,, ಗ್ರಾಮದ ಸಿದ್ದೇಗೌಡ ಕುಟುಂಬದವರು ಸಮುದಾಯ ಭವನವನ್ನು ನಿರ್ಮಿಸಿ ಕೊಟ್ಟಿದ್ದಾರೆ ನಾನು ಕೂಡ ರಾಮಮಂದಿರ ನಿರ್ಮಾಣಕ್ಕೆ ಅನುದಾನವನ್ನು ಕೊಟ್ಟಿದ್ದೆ ಅದರ ಜೊತೆ ಗ್ರಾಮಸ್ತರು ಎಲ್ಲರೂ ಹಣವನ್ನು ಹಾಕಿ ಮಂದಿರವನ್ನು ನಿರ್ಮಾಣ ಮಾಡಿದ್ದಾರೆ.

ಈ ದಿನ ರಾಮಮಂದಿರ ಹಾಗೂ ಸಮುದಾಯ ಭವನವನ್ನು ಪೂಜ್ಯ ಸ್ವಾಮೀಜಿಗಳ ಸಮ್ಮುಖದಲ್ಲಿ ಉದ್ಘಾಟನೆ ಮಾಡಲಾಗಿದೆ ಗ್ರಾಮಸ್ತರು ಅದನ್ನು ಸದ್ಬಳಕೆ ಮಾಡಿಕೊಂಡು ಆದರ್ಶ ಪುರುಷರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು

ಈ ಕಾರ್ಯಕ್ರಮದಲ್ಲಿ ಬೆಂಗಳೂರು ಶಾಖಾ ಮಠದ ಶ್ರೀ.ಸೌಮ್ಯನಾಥಸ್ವಾಮಿ ಸತ್ತೇಗಾಲ ಗ್ರಾಮದ ಹಿರಿಯರು ಹಾಗೂ ಶ್ರೀ ರಾಮ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಡಾ. ಚೌಡೀಪುರ ಸಿದ್ದೇಗೌಡ, ಚಂದ್ರಾವತಿ, ಮಗಳು ಅನುರಾಧ, ಗುರುದತ್, ಹನೂರು ಕ್ಷೇತ್ರ ಮಾಜಿ ಶಾಸಕ ಆರ್.ನರೇಂದ್ರ, ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಒಕ್ಕಲಿಗರ ಸಂಘದ ಅಧ್ಯಕ್ಷ ಮಾದೇಶ್, ಪದಾಧಿಕಾರಿಗಳು, ಬೆಂಗಳೂರಿನ ರವೀಂದ್ರ, ಟ್ರಸ್ಟ್ ಕಾರ್ಯದರ್ಶಿ ಶೇಖರ್ ಮಾದೇಗೌಡ

ಜಯರಾಮಗೌಡ್ರು, ವೆಂಕಟಾಚಲಗೌಡ, ಶಿವಣ್ಣೇಗೌಡ್ರು, ಉದಯಕುಮಾರ್, ಎಂ.ರಾಜು, ಸಿ.ಮಹೇಶ್, ಎನ್.ವೆಂಕಟೇಶ್, ಕೆ.ಕೆ.ನಟರಾಜು ಗೌಡ, ಹ್ಯಾಂಡ್ ಪೋಸ್ಟ್ ರವೀಂದ್ರ ಹಾಗೂ ಇತರರು ಇದ್ದರು.

ಫಸಲ್ ಬಿಮಾ ಯೋಜನೆಗೆ ಅರ್ಹ ರೈತರಿಂದ ಅರ್ಜಿ ಆಹ್ವಾನ



ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ರೈತರು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಸವಲತ್ತುಗಳನ್ನು ಪಡೆಯಲು ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ ಎಂದು ತಾಲೂಕು ಕೃಷಿ ಸಹಾಯಕ ನಿರ್ದೇಶಕರಾದ ಎಚ್ ಎಸ್ ಶಿವರಾಜ್ ಕುಮಾರ್ ತಿಳಿಸಿದರು ಮಾತನಾಡುತ್ತಾ ತಾಲೂಕಿನಲ್ಲಿ 2026 ನೇ ಸಾಲಿನ ಮುಂಗಾರು ಹಂಗಾಮುಗಳಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ನೊಂದಣಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಗ್ರಾಮ ಪಂಚಾಯಿತಿ ಮಟ್ಟದ ವಿಮಾ ಘಟಕಕ್ಕೆ ತಾಲೂಕಿಗೆ ತೊಗರಿ (ಮಳೆಯಾಶ್ರಿತ), ರಾಗಿ (ಮಳೆಯಾಶ್ರಿತ) ಬೆಳೆಗಳನ್ನು ಬೆಳೆ ವಿಮೆಗೆ ಅಧಿಸೂಚನೆ ಮಾಡಲಾಗಿದೆ. ಹೋಬಳಿ ಮಟ್ಟದ ವಿಮಾ ಘಟಕಗಳಿಗೆ ಅಲಸಂದೆ (ಮಳೆಯಾಶ್ರಿತ), ರಾಗಿ(ನೀರಾವರಿ), ಹುರುಳಿ (ಮಳೆಯಾಶ್ರಿತ), ಹೆಸರು (ಮಳೆಯಾಶ್ರಿತ), ಸಾಮೆ (ಮಳೆಯಾಶ್ರಿತ) & ಹತ್ತಿ (ಮಳೆಯಾಶ್ರಿತ), ಬೆಳೆಗಳಿಗೆ ವಿಮೆಗೆ ನೋಂದಾಯಿಸಲು ಅಧಿಸೂಚನೆ ಮಾಡಲಾಗಿದೆ.

ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ಆಸಕ್ತ ರೈತರು ಬೆಳೆ ವಿಮೆಗೆ ನೋಂದಣಿ ಮಾಡಲು ಹೆಸರು (ಮಳೆಯಾಶ್ರಿತ) ಹಾಗೂ ಹತ್ತಿ (ಮಳೆಯಾಶ್ರಿತ) 30/06/2026 ರಂದು, ಅಲಸಂದೆ (ಮಳೆಯಾಶ್ರಿತ) ಹಾಗೂ ತೊಗರಿ (ಮಳೆಯಾಶ್ರಿತ) ಬೆಳೆಗೆ ದಿನಾಂಕ: 15/07/2026, ರಾಗಿ (ಮಳೆಯಾಶ್ರಿತ), ರಾಗಿ (ನೀರಾವರಿ) ಮತ್ತು ಸಾಮೆ (ಮಳೆಯಾಶ್ರಿತ) ಹಾಗೂ ಹುರುಳಿ (ಮಳೆಯಾಶ್ರಿತ), ಬೆಳೆಗಳಿಗೆ 14/08/2026 ರಂದು ನೊಂದಣಿಗೆ ಕೊನೆಯ ದಿನಾಂಕವಾಗಿರುತ್ತದೆ.

ಬ್ಯಾಂಕಿನಲ್ಲಿ ಬೆಳೆಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಈ ಯೋಜನೆಯಡಿ ಒಳಪಡಿಸಲಾಗುವುದು. ತದ ನಂತರ ಬೆಳೆ ಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛೆ ಪಡದೇ ಇದ್ದಲ್ಲಿ ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೊಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದ್ದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈ ಬಿಡಲಾಗುವುದು. ಆಸಕ್ತ ರೈತರುಗಳು ತಮ್ಮ ವ್ಯಾಪ್ತಿಯ ಬ್ಯಾಂಕುಗಳಲ್ಲಿ, ನಾಗರಿಕ ಸೇವಾ ಕೇಂದ್ರಗಳಲ್ಲಿ, (ಗ್ರಾಮ ಒನ್), ಸಾಮಾನ್ಯ ಸೇವಾ ಕೇಂದ್ರ ಅಖಅ (ಅಠಟಟಠಟಿ ಖಜಡಿತುಭಿಜ ಅಜಟಣಜಡಿ) ಗಳಲ್ಲಿ ಬೆಳೆ ವಿಮೆಗೆ ನೊಂದಣಿ ಮಾಡಬಹುದಾಗಿದೆ . ಎಂದು ತಿಳಿಸಿದ್ದಾರೆ

ಇಕ್ಬಾಲ್ ಹುಸೇನ್ ಆರೋಗ್ಯಕ್ಕೆ ದೇವಾಲಯ, ದರ್ಗಾದಲ್ಲಿ ಪ್ರಾರ್ಥನೆ

ಕಾಂಗ್ರೆಸ್ ಕಾರ್ಯಕರ್ತರಿಂದ ಶಾಸಕರ ಆರೋಗ್ಯ ಬಯಸಿ ಚಂಡಿಕಾ ಹೋಮ



ರಾಮನಗರ : ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರು ಶೀಘ್ರ ಗುಣಮುಖರಾಗಲೆಂದು ಹಾರೈಸಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ನಗರದ ಶಕ್ತಿ ದೇವತೆ ಚಾಮುಂಡೇಶ್ವರಿ ದೇವಾಲಯದಲ್ಲಿ ಮಾಜಿ ಶಾಸಕ ಕೆ.ರಾಜು ನೇತೃತ್ವದಲ್ಲಿ ಚಂಡಿಕಾ ಹೋಮ ನಡೆಸಿ, ಇಕ್ಬಾಲ್ ಹುಸೇನ್ ಅವರು ಶೀಘ್ರ ಗುಣಮುಖರಾಗುವ ಜತೆಗೆ ದೀರ್ಘಾಯಸ್ಸು ಹೊಂದುವಂತೆ ಪ್ರಾರ್ಥನೆ ಸಲ್ಲಿಸಿದರು.

ಈ ವೇಳೆ ಕೆ.ರಾಜು ಮಾತನಾಡಿ, ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಗಾಗುತ್ತಿರುವ ಜನಪ್ರಿಯ ಶಾಸಕ ಇಕ್ಬಾಲ್ ಹುಸೇನ್ ಅವರು ಶೀಘ್ರ ಗುಣಮುಖರಾಗಲೆಂದು ಚಂಡಿಕಾ ಹೋಮ ನಡೆಸಲಾಗಿದೆ. ಶಕ್ತಿ ದೇವತೆ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ಜತೆಗೆ ಗಣೇಶ ದೇವಾಲಯದಲ್ಲಿ ಸುದರ್ಶನ ಹೋಮ ನಡೆಸಲಾಗಿದೆ ಎಂದರು.

ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಇಕ್ಬಾಲ್ ಹುಸೇನ್ ಅವರು ಅನೇಕ ಕನಸುಗಳನ್ನು ಕಂಡಿದ್ದಾರೆ. ಇದೀಗ ಜಿಲ್ಲೆಯ ಮಗ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯೂ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಕನಸುಗಳನ್ನು ನನಸು ಮಾಡುವ ಶಕ್ತಿ, ಆಯುಸ್ಸು ಮತ್ತು ಆರೋಗ್ಯವನ್ನು ನೀಡಲಿ ಎಂದು ಕ್ಷೇತ್ರದ ಕಾರ್ಯಕರ್ತರು, ಅಭಿಮಾನಿಗಳ ಪರವಾಗಿ ದೇವರಲ್ಲಿ ಪ್ರಾರ್ಥಿಸಿದ್ದೇವೆ. ಅವರು ಶೀಘ್ರ ಗುಣಮುಖರಾಗಿ ರಾಮನಗರವನ್ನು ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವನ್ನಾಗಿ ಮಾಡಲು ಭಗವಂತನು ಶಕ್ತಿ ನೀಡಲಿ ಎಂದರು ಪ್ರಾರ್ಥಿಸಿದ್ದೇವೆ ಎಂದು ಹೇಳಿದರು.

ಯುವ ಮುಖಂಡ ಅನಿಲ್ ಜೋಗಿಂದರ್ ಮಾತನಾಡಿ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಶಾಸಕ ಇಕ್ಬಾಲ್ ಹುಸೇನ್ ಅವರು ಹಗಲು-ರಾತ್ರಿಯೆನ್ನದೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಎಲ್ಲಾ ವರ್ಗದ ಜನರ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಬಡವರಿಗೆ ನಿವೇಶನ ಹಂಚುವ ಕೆಲಸ ಪ್ರಗತಿಯಲ್ಲಿದೆ. ಸರ್ವರ ಒಳಿತಿಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಶಾಸಕರಿಗೆ ಭಗವಂತ ದೀರ್ಘಾಯಸ್ಸು ಕರುಣಿಸಲಿ ಎಂದು ಪ್ರಾರ್ಥಿಸಿದ್ದೇವೆ ಎಂದರು.

ಜಿಲ್ಲೆಯ ಮಗನಾದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಅವರ ಆಪ್ತರಾದ ಶಾಸಕರು ಈ ಮೂಲಕ ಕ್ಷೇತ್ರಕ್ಕೆ ಇನ್ನಷ್ಟು ಅನುದಾನ ತಂದು ಅಭಿವೃದ್ಧಿ ಮಾಡಬೇಕೆಂಬ ಕನಸು ಕಾಣುತ್ತಿದ್ದರು. ಕ್ಷೇತ್ರದ ಜನರ ಕಷ್ಟಸುಖಗಳಿಗೆ ಸ್ಪಂದಿಸಬೇಕು. ಅವರಿಗೆ ಕುಡಿಯುವ ನೀರು, ಬಡವರಿಗೆ ಸೂರು ನೀಡಿ ಎಲ್ಲರಿಗೂ ಮೂಲಭೂತ ಸೌಕರ್ಯಗಳನ್ನು ನೀಡಬೇಕೆಂಬ ಅಭಿಲಾಷೆ ಹೊಂದಿದ್ದರು. ಅವರ ಎಲ್ಲಾ ಆಶೋತ್ತರಗಳು ಈಡೇರಲಿ ಎಂದು ಇಂದು ನಾವೆಲ್ಲರೂ ಅವರ ಹೆಸರಿನಲ್ಲಿ ವಿಶೇಷ ಪೂಜೆ ನೆರವೇರಿಸುತ್ತಿದ್ದೇವೆ' ಎಂದರು.

ಜಿಲ್ಲಾ ಹಿಂದುಳಿದ ಜಾತಿಗಳ ಮಹಾ ಒಕ್ಕೂಟದ ಅಧ್ಯಕ್ಷ ನಾಗರಾಜು(ರೈಡ್) ಅವರು ಮಾತನಾಡಿ, ಹೃದಯದ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಶಾಸಕರು ಶೀಘ್ರ ಗುಣಮುಖರಾಗಲಿ, ಇನ್ನಷ್ಟು ಕಾಲ ಆರೋಗ್ಯವಂತರಾಗಿ ಬಾಳುವ ಜತೆಗೆ ಕ್ಷೇತ್ರದ ಜನರ ಆಶೋತ್ತರಗಳಿಗೆ ಸ್ಪಂದಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದ್ದೇವೆ ಎಂದು ಹೇಳಿದರು. ಈ ವೇಳೆ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ ಮುತ್ತುರಾಜು, ಜಯಲಕ್ಷ್ಮಮ್ಮ, ಮುಖಂಡರಾದ ಲೋಹಿತ್ ಬಾಬು, ನರಸಿಂಹ, ಗಂಗಾಧರ್, ಚಂದ್ರಸಾಗರ್, ಭೂಷಣ್, ವಸೀಂ, ಇನಾಯತ್, ಚಿಕ್ಕಸ್ವಾಮಿ, ಗುಡ್ಡೆ ವೆಂಕಟೇಶ್, ಚನ್ನಮಾನಹಳ್ಳಿ ರಾಜು, ಭದ್ರಪ್ಪ, ಗಿರೀಶ್, ನಾಗೇಶ್ ಸೇರಿದಂತೆ ಹಲವರಿದ್ದರು

ಪೀರನ್ ಷಾ ವಾಲಿ ದರ್ಗಾದಲ್ಲಿ ಖುರಾನ್ ಪಠಣ

ಶಾಸಕ ಇಕ್ಬಾಲ್ ಹುಸೇನ್ ಅವರ ಆರೋಗ್ಯ ಶೀಘ್ರ ಸುಧಾರಿಸಲಿ ಎಂದು ಹಾರೈಸಿ ರಾಮನಗರ ಅಬಿವೃದ್ಧಿ ಪ್ರಾಧಿಕಾರಿದ ನಿರ್ದೇಶಕ ಪರ್ವೇಜ್ ಪಾಷಾ ನೇತೃತ್ವದಲ್ಲಿ ನಗರದ ಪೀರನ್ ಷಾ ವಾಲಿ ದರ್ಗಾದಲ್ಲಿ ಖುರಾನ್ ಮಾಡಲಾಯಿತು. ಶಾಸಕರು ಆರೋಗ್ಯವಂತರಾಗಿ ಮರಳಿ ಬಂದು ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿ ಎಂದು ಅಲ್ಲಾಹುವಿನಲ್ಲಿ ಪ್ರಾರ್ಥಿಸಿರುವುದಾಗಿ ಅವರು ತಿಳಿಸಿದರು. ಈ ವೇಳೆ ನಗರಸಭೆ ಸದಸ್ಯ ನಿಜಾಮುದ್ದೀನ್ ಸೇರಿದಂತೆ ಹಲವು ಅಲ್ಪಸಂಖ್ಯಾತ ಮುಖಂಡರು ಇದ್ದರು.

ಉತ್ತರ ಬಡಾವಣೆ ಶಾಲೆ ಅತ್ಯಂತ ಸುಸಜ್ಜಿತ ಶಾಲೆ



ತುಮಕೂರು- ಇಡೀ ರಾಜ್ಯದಲ್ಲಿಯೇ ತುಮಕೂರಿನ ಉತ್ತರ ಬಡಾವಣೆ ಶಾಲೆ ಅತ್ಯಂತ ಸುಸಜ್ಜಿತ ಶಾಲೆಯಾಗಿ ಪರಿವರ್ತನೆಗೊಂಡು, ಸರಕಾರಿ ಶಾಲೆಗಳಲ್ಲಿಯೇ ಮಾದರಿ ಶಾಲೆ ಎನಿಸಿದೆ ಎಂದು ತುಮಕೂರು ನಗರ ಶಾಸಕ ಜಿ.ಬಿ.ಜೋತಿಗಣೇಶ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಶಿರಾಗೇಟ್‌ನ ಸರಕಾರಿ ಹಿರಿಯಪ್ರಾಥಮಿಕ ಶಾಲೆ ಉತ್ತರ ಬಡಾವಣೆಯಲ್ಲಿ ಶ್ರೀಚಾಮುಂಡೇಶ್ವರಿ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಲೇಖನ ಸಾಮಗ್ರಿಗಳ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು,ಅಜಾಕ್ಸ್ ಇಂಜಿನಿಯರಿಂಗ್ ಕಂಪನಿಯ ಸಿ.ಎಸ್. ಆರ್. ನಿಧಿ ಸಹಯೋಗದಲ್ಲಿ ಸುಮಾರು 15 ಕೋಟಿ ರೂ ಅದ್ಭುತವಾದ ಕಟ್ಟಡ ನಿರ್ಮಾಣ ಗೊಂಡಿದ್ದು,ಮುಂದಿನ ದಿನಗಳಲ್ಲಿ ಇಡೀ ಶಾಲೆಯ ಚಿತ್ರಣವೇ ಬದಲಾಗಲಿದೆ.2018-19ರಲ್ಲಿ 500 ಇದ್ದ ಮಕ್ಕಳ ಸಂಖ್ಯೆ ಇಂದು 1060ಕ್ಕೆ ಮುಟ್ಟಿದೆ. ಮತ್ತಷ್ಟು ಎತ್ತರಕ್ಕೆ ಶಾಲೆ ಹಾಗೂ ಶಾಲೆಯಲ್ಲಿ ಕಲಿಯುವ ಮಕ್ಕಳು ಬೆಳೆಯುವಂತಾಗಲಿ.ಇದಕ್ಕೆ ಅಗತ್ಯವಿರುವ ಪೂರಕ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯವನ್ನು ಇಲಾಖೆಯ ಕಲ್ಪಿಸುವಂತೆ ಉಪಸ್ಥಿತರಿದ್ದ ಡಿಡಿಪಿಐ ಮತ್ತು ಬಿಇಓ ಅವರಿಗೆ ಸೂಚಿಸಿದರು.


ಅಜಾಕ್ಸ್ ಸಂಸ್ಥೆ ತನ್ನ ಸಿ.ಎಸ್.ಆರ್.ನಿಧಿಯಲ್ಲಿ ಸರಕಾರಿ ಶಾಲೆಗಳ ಅಭಿವೃದ್ದಿಗಾಗಿ ಶಾಲೆಗಳನ್ನು ಆಯ್ಕೆಯಲ್ಲಿ ತೊಡಗಿದ್ದ ಸಂದರ್ಭದಲ್ಲಿ ಸುಮಾರು 7 ಎಕರೆ ವಿಸ್ತೀರ್ಣ ಹೊಂದಿರುವ ಈ ಶಾಲೆ ಎಲ್ಲ ರೀತಿಯಿಂದಲೂ ಅವರಿಗೆ ಸೂಕ್ತವಾಗಿ ಕಂಡು ಬಂದ ಹಿನ್ನೆಲೆಯಲ್ಲಿ ಸುಮಾರು 15 ಕೋಟಿ ರೂಗಳನ್ನು ಖರ್ಚು ಮಾಡಿ,ಮೂರು ಹಂತಸ್ಥಿನ ಕಟ್ಟಡದ ಜೊತೆಗೆ, ಕಂಪ್ಯೂಟರ್ ಲ್ಯಾಬ್,ಸ್ಮಾರ್ಟ್ ಕ್ಲಾಸ್ ರೂ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಿ, ಒಂದು ಹಂತದವರೆಗೆ ನಿರ್ವಹಣೆಯನ್ನು ಮಾಡಲು ಮುಂದಾಗಿದೆ.ಈಗಾಗಲೇ ಕಟ್ಟಡ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ. ಉತ್ತರ ಬಡಾವಣೆ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಅಜಾಕ್ಸ್ ಇಂಜಿನಿಯರಿಂಗ್ ಕಂಪನಿಯ ಮುಖ್ಯಸ್ಥರಾದ ವಿಜಯನ್ ಹಾಗೂ ಸಿ.ಎಸ್. ಆರ್.ಅಧಿಕಾರಿ ಮಂಜುನಾಥ್ ಅವರಿಗೆ ಹಾಗು ಇದಕ್ಕಾಗಿ ಶ್ರಮಿಸಿದ ಡಿಡಿಪಿಐ, ಬಿಇಓ ಹಾಗೂ ಶಾಲೆಯ ಪದವಿಧರ ಮುಖ್ಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಹೃಪೂರ್ವ ಅಭಿನಂದನೆ ಸಲ್ಲಿಸುವುದಾಗಿ ಶಾಸಕ ಜಿ.ಬಿ.ಜೋತಿಗಣೇಶ್ ತಿಳಿಸಿದರು.

ಶ್ರೀಚಾಮುಂಡೇಶ್ವರಿ ಎಜುಕೇಷನ್ ಟ್ರಸ್ಟ್ನ ಅಧ್ಯಕ್ಷರಾದ ಡಾ.ಶ್ರೇಯಸ್ ಮಾತನಾಡಿ,ವಿದ್ಯೆಗಿಂತ ದೊಡ್ಡ ಸಂಪತ್ತು ಮತ್ತೊಂದಿಲ್ಲ.ನಮ್ಮದು ಶಿಕ್ಷಕರ ಕುಟುಂಬ. ಅವರಿಂದ ಕಲಿತ ಮಾನವೀಯ ಗುಣಗಳನ್ನು ನಮ್ಮನ್ನು ಸಮಾಜಸೇವೆಗೆ ಕರೆ ತಂದಿದೆ.ವಿದ್ಯೆ ಕಲಿಯುವ ಮಕ್ಕಳಿಗೆ ಹಲವು ವರ್ಷಗಳಿಂದ ಈ ರೀತಿಯ ಸೇವೆಯನ್ನು ಮಾಡುತ್ತಿದ್ದೇವೆ. ಇಲ್ಲಿ ಕಲಿತವರು ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಹೋಗಿ, ಸಮಾಜಕ್ಕೆ ಏನಾದರೂ ನೀಡಿದರೆ ಅದಕ್ಕಿಂತ ದೊಡ್ಡ ಉಪಕಾರ ಮತ್ತೊಂದಿಲ್ಲ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಹನುಮಂತಪ್ಪ ಮಾತನಾಡಿ,ಉತ್ತರ ಬಡಾವಣೆಯ ಶಾಲೆ ಇಂದು ಈ ಮಟ್ಟಕ್ಕೆ ಬರಲು ಕಾರಣ, ಐಎಎಸ್ ಅಧಿಕಾರಿ ಜಿ.ಪ್ರಭು ಹಾಗೂ ಇಲ್ಲಿನ ಶಿಕ್ಷಕರ ವೃಂದ.ಈಗಾಗಲೇ ಶಾಲೆಯಲ್ಲಿರುವ ಶಿಕ್ಷಕರ ಕೊರತೆ ನೀಗಿಸಲು ಹೆಚ್ಚುವರಿಯಾಗಿ ನಾಲ್ವರು ಅಥಿತಿ ಶಿಕ್ಷಕರನ್ನು ನೀಡಲಾಗಿದೆ. ಅಲ್ಲದೆ ಶೈಕ್ಷಣಿಕ ವ್ಯವಸ್ಥೆಗೆ ಧಕ್ಕೆಯಾಗದಂತೆ ಎಲ್ಲಾ ಕ್ರಮಗಳನ್ನು ಇಲಾಖೆ ವಹಿಸುತ್ತಿದೆ. ಇದರ ಪ್ರಯೋಜನವನ್ನು ಮಕ್ಕಳು ಪಡೆದುಕೊಂಡು, ತಮ್ಮ ಭವಿಷ್ಯವನ್ನು ಉತ್ತಮ ಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಡಿಡಿಪಿಐ ಕೆ.ಜಿ.ರವಿಚಂದ್ರ ಅಜಾಕ್ಸ್ ಸಂಸ್ಥೆಯ ಸಿ.ಎಸ್.ಆರ್. ಅಧಿಕಾರಿ ಮಂಜುನಾಥ್ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಪದವಿಧರ ಮುಖ್ಯ ಶಿಕ್ಷಕ ಡಿ.ಎಸ್.ಶಿವಸ್ವಾಮಿ,ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಟಿ.ಓಬಳಯ್ಯ ವಹಿಸಿದ್ದರು. ವೇದಿಕೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಪಿ.ಜಿ.ತಿಮ್ಮೇಗೌಡ, ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಟಿ.ಜಿ.ಪ್ರಸನ್ನಕುಮಾರ್, ಸಮನ್ವಯಾಧಿಕಾರಿ ಶ್ರೀಮತಿ ಟಿ.ಚೇತನ, ಶಿಕ್ಷಣ ಸಂಯೋಜಕ ಗೋವಿಂದರಾಜು, ಸಂಪನ್ಮೂಲ ವ್ಯಕ್ತಿ ಸೈಯದ್ ಮೆಹಬೂಬ್ ಪಾಷ, ಎಸ್.ಡಿ.ಎಂ.ಸಿ ಉಪಾಧ್ಯಕ್ಷೆ ಜಬೀನಾ ಭಾನು, ಸದಸ್ಯರಾದ ಸೈಯಧ್ ಫೈರೋಜ್, ಭಾಗ್ಯಮ್ಮ, ಅನಿತಾ, ಬಸವನಗೌಡ ಹಂದ್ರಾಳ, ಕಮಲಮ್ಮ ವಿಶಾಲಾಕ್ಷಿ, ಮೋಹನಕುಮಾರ್, ಪುಷ್ಪ, ವಿಜಯಕುಮಾರಿ ಸೇರಿದಂತೆ ಎಲ್ಲಾ ಸದಸ್ಯರುಗಳು, ಶಿಕ್ಷಕ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನಗರದಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮವಹಿಸಿ-ಕೆ.ಎನ್.ರಾಜಣ್ಣ ಸೂಚನೆ



ಮಧುಗಿರಿ : ತುಕ್ಕು ಹಿಡಿದಿರುವ ಟ್ಯಾಂಕರ್ ನಲ್ಲಿ ನೀರು ಸರಬರಾಜು ಮಾಡುತ್ತಿದ್ದೀರಾ... ಎಂಬ ದೂರುಗಳಿವೆ. ಈ ನೀರು ಬಳಸಿ ಯಾರಾದರೂ ವಾಂತಿ ಬೇದಿಯಿಂದ ಅಸ್ವಸ್ತರಾದರೆ ಏನು ಗತಿ...? ಆದಷ್ಟು ಬೇಗ ಟ್ಯಾಂಕರ್ ಬದಲಾಯಿಸಿ ಎಂದು ಶಾಸಕ ಕೆ.ಎನ್. ರಾಜಣ್ಣ ಸೂಚನೆ ನೀಡಿದರು.

ಪಟ್ಟಣದ ಪುರಸಭೆಯಲ್ಲಿ ಬುಧವಾರ ಸಾರ್ವಜನಿಕರ ದೂರುಗಳ ಬಗ್ಗೆ ಕಚೇರಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು ಪಟ್ಟಣದಲ್ಲಿ ಸೊಳ್ಳೆಗಳು ಹೆಚ್ಚಾಗಿದ್ದು, ಪ್ರತಿ ದಿನ ಫಾಗಿಂಗ್ ಮಾಡಿಸಿ, ಚರಂಡಿಗಳ ಸ್ವಚ್ಛತೆಯ ಬಗ್ಗೆ ಗಮನಹರಿಸಿ ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮವಹಿಸಿ ಮುಂದಿನ ದಿನಗಳಲ್ಲಿ ಯಾವುದೇ ದೂರು ಬರದಂತೆ ನೋಡಿಕೊಳ್ಳಿ. ಮತ್ತೆ ದೂರು ಬಂದರೆ ಜಿಲ್ಲಾಧಿಕಾರಿಗಳನ್ನು ಕರೆಸಿ ಸಭೆ ಮಾಡಿ ಪುರಸಭೆ ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಾಧಿಕಾರಿ ಸುರೇಶ್ ರವರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಕಂದಾಯ ಪಾವತಿಸಿದ್ದರೂ, ಈ ದಾಖಲೆಗಳು ಅಪ್ ಡೇಟ್ ಆಗುತ್ತಿಲ್ಲ. ಕೆಲ ಸಾರ್ವಜನಿಕರು ಅರ್ಜಿ ಕಳೆದುಕೊಂಡಿರುತ್ತಾರೆ ಅಂತವರು ಮತ್ತೆ ಕಂದಾಯ ಕಟ್ಟಬೇಕಾದ ಅನಿವಾರ್ಯತೆ ಇದೆ. ಎಂದು ಪುರಸಭೆ ಮಾಜಿ ಅಧ್ಯಕ್ಷ ಲಾಲಾಪೇಟೆ ಮಂಜುನಾಥ್ ಶಾಸಕರ ಗಮನಕ್ಕೆ ತಂದಾಗ, ಕಂದಾಯ ಪಾವತಿಯ ದಾಖಲೆಗಳು ಸಮರ್ಪಕವಾಗಿರಬೇಕು. ಕಂದಾಯ ಪಾವತಿಯ ದಾಖಲೆಗಳು ಅಪ್ ಡೇಟ್ ಆಗದಿದ್ದರೆ ಹೇಗೆ ನೀವು ಮಾಡುವ ಕೆಲಸಕ್ಕೆ ನಾವು ಸಾರ್ವಜನಿಕರಿಂದ ದೂರುಗಳನ್ನು ಎದುರಿಸಬೇಕು. ಆದಷ್ಟು ಬೇಗ ಇದರ ಬಗ್ಗೆ ಕ್ರಮ ವಹಿಸಿ ಎಂದು ಸೂಚನೆ ನೀಡಿದರು.

ಗ್ರಾಮ ಠಾಣದಲ್ಲಿರುವ ಪಿತ್ರಾರ್ಜಿತ ಆಸ್ತಿಗಳಿಗೆ 50 ವರ್ಷಗಳಿಂದ ವಾಸವಾಗಿದ್ದರೂ ಇ-ಖಾತೆ ಮಾಡಲು ಹೆಚ್ಚಿನ ದಾಖಲೆಗಳನ್ನು ಕೇಳುತ್ತಾರೆ ಅವರು ಕೇಳುವ ದಾಖಲೆಗಳೇ ಸಿಗುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗಿದೆ ಎಂದು ಮಾಜಿ ಅಧ್ಯಕ್ಷ ಗೋವಿಂದರಾಜು ಶಾಸಕರ ಗಮನಕ್ಕೆ ತಂದಾಗ, ಇಂತಹ ಸಮಸ್ಯೆಗಳನ್ನು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿ ಬಗೆಹರಿಸಿ ಎಂದು ತಾಕೀತು ಮಾಡಿದರು.

ಸಭೆಯಲ್ಲಿ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಹಶೀಲ್ದಾರ್ ಮಂಜುನಾಥ್, ನಗರಾಭಿವೃದ್ಧಿ ಕೋಶದ ನಿರ್ದೇಶಕ ಯೋಗಾನಂದ, ತಾ. ಪಂ ಇಓ ಬಿಕೆ ಉತ್ತಮ್, ಸಹಾಯಕ ನಿರ್ದೇಶಕ ಧನಂಜಯ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಹಾಗೂ ಇತರರು ಇದ್ದರು .

ಸರ್ವಮಂಗಳ ನಾಗಯ್ಯ ಸರ್ಕಾರಿ ಶಾಲೆಗೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ವೈ.ಎಸ್.ಸಿಂಧು ನೇಮಕ



ತುಮಕೂರು; ಜಿಲ್ಲೆಯ ಗ್ರಾಮಾಂತರ ತಾಲ್ಲೂಕಿನ ಕೋರಾ ಗ್ರಾಮದ ಸರ್ವಮಂಗಳ ನಾಗಯ್ಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ಯ ಶಾಲಾ ಅಭಿವೃದ್ಧಿ ಅಧ್ಯಕ್ಷರಾಗಿ ಗ್ರಾಮದ ವೈ. ಎಸ್.ಸಿಂಧು ಅವರು ನೇಮಕವಾಗಿದ್ದು ಶಾಲೆಯ ಶೈಕ್ಷಣಿಕ ಪ್ರಗತಿಗೆ ಶ್ರಮಿಸುವುದಾಗಿ ತಿಳಿಸಿದ್ದಾರೆ.

ಶಾಲೆಯಲ್ಲಿ ನಡೆದ ಸರಳ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಸ್ ಡಿ ಎಂ ಸಿ ಅಧ್ಯಕ್ಷರಾದ ಸಿಂಧು ಮಾತನಾಡುತ್ತ ಕಾಲ ಕಾಲಕ್ಕೆ ಸರ್ಕಾರದ ಅದೇಶದಂತೆ ಶಾಲೆಯ ಶಿಕ್ಷಕರು ಶ್ರಮಿಸಬೇಕಿದೆ ಅದರಂತೆ ಗ್ರಾಮದ ಪೋಷಕರು ಶಾಲಾ ಅಭಿವೃದ್ಧಿ ಸಮಿತಿಯ ಎಲ್ಲಾ ಪದಾಧಿಕಾರಿಗಳ ಸಹಕಾರವೂ ದೊರೆಯಲಿದೆ ಎಂದರು.

ಇದೇ ವೇಳೆ ಎಸ್ ಡಿಎಂಸಿ ಉಪಾಧ್ಯಕ್ಷರಾಗಿ ರವಿಚಂದ್ರ, ಸದಸ್ಯರುಗಳಾಗಿ ಗುರು ಬಸವಣ್ಣ,ಯತೀಶ್, ಸುಮಿತ್ರಾ, ಶಿವರಾಜು, ಸಹನಾ, ಮಂಜುಳಾ,ಫೈರೋಜ್, ನೂರುನ್ನಿಸಾ, ಸುಕನ್ಯಾ, ಚಂದ್ರಕಲಾ, ಪವಿತ್ರ, ಶೈಲಾಜ, ಚಂದ್ರಶೇಖರ್, ಸಿದ್ದರಾಜು,ಮಹೇಶ್, ನರಸಿಂಹಮೂರ್ತಿ ಅವರುಗಳು ಆಯ್ಕೆಯಾದರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕರಾದ ಶೈಲಾಜ, ಸಹಶಿಕ್ಷಕರಾದ ಶಶಿಕಲಾ,ಸೀತಾಲಕ್ಷ್ಮೀ, ವಿಶ್ವನಾಥ್, ಸಿದ್ದರಾಮಕ್ಕ,ಹರೀಶ್, ಸುಮ, ಸೌಮ್ಯ, ರವೀಶ್ ಸೇರಿದಂತೆ ಗ್ರಾಮಸ್ಥರು ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

20 ವರ್ಷಗಳ ನಂತರ ಸಾಸಲು ಶ್ರೀ ಬನಶಂಕರಿ – ಮರುಳಸಿದ್ದೇಶ್ವರ ಜಂಟಿ ಜಾತ್ರೆ



ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ಪ್ರಸಿದ್ಧ ಹಾಗೂ ಐತಿಹಾಸಿಕ ಧಾರ್ಮಿಕ ಕ್ಷೇತ್ರವಾದ ಸಾಸಲು ಗ್ರಾಮದಲ್ಲಿ ಕಳೆದ ಎರಡು ದಶಕಗಳಿಂದ ಸ್ಥಗಿತಗೊಂಡಿದ್ದ ಶ್ರೀ ಬನಶಂಕರಿ ಅಮ್ಮನವರು ಹಾಗೂ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯವರ ಭವ್ಯ ಜಂಟಿ ಜಾತ್ರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಇದೇ ಜೂನ್ 27 ರಿಂದ ಜುಲೈ 2 ರವರೆಗೆ ಈ ಸೀಮೆಯ ಹಬ್ಬ ಅತ್ಯಂತ ವೈಭವದಿಂದ ಜರುಗಲಿದೆ ಎಂದು ದೇವಸ್ಥಾನ ಮಂಡಳಿ ಹಾಗೂ ಗ್ರಾಮಸ್ಥರು ತಿಳಿಸಿದ್ದಾರೆ.

ವಿವಿಧ ಕಾರಣಗಳಿಂದಾಗಿ ಕಳೆದ 20 ವರ್ಷಗಳಿಂದ ನಿಂತುಹೋಗಿದ್ದ ಈ ಧಾರ್ಮಿಕ ಆಚರಣೆಯನ್ನು ಪುನರಾರಂಭಿಸಲು ಇಡೀ ಸೀಮೆಯ ಭಕ್ತ ಮಹಾಜನರು ಹಾಗೂ ದೇವಾಂಗ ಮಂಡಳಿಯವರು ಒಮ್ಮತದ ತೀರ್ಮಾನ ಕೈಗೊಂಡಿದ್ದು, ಗ್ರಾಮದಲ್ಲಿ ಈಗಿನಿಂದಲೇ ಹಬ್ಬದ ವಾತಾವರಣ ಮನೆಮಾಡಿದೆ.

ದಿನದ ವಾರು ಧಾರ್ಮಿಕ ಕಾರ್ಯಕ್ರಮಗಳ ವಿವರ:

ಜೂನ್ 27 (ಶನಿವಾರ): ಶ್ರೀ ಆಂಜನೇಯ ಸ್ವಾಮಿಯವರಿಗೆ ಭಕ್ತಿಭಾವದ "ಬಿಲ್ಲುಗೂಡು ನೂರೊಂದೆಡೆ ಸೇವೆ" ನೆರವೇರಿಸುವ ಮೂಲಕ ಧಾರ್ಮಿಕ ಉತ್ಸವಕ್ಕೆ ಅಧಿಕೃತ ಚಾಲನೆ ಸಿಗಲಿದೆ.

ಜೂನ್ 28 (ಭಾನುವಾರ): ರಾತ್ರಿ 8:30ಕ್ಕೆ ಸಾಂಪ್ರದಾಯಿಕ ಧ್ವಜಾರೋಹಣ ನೆರವೇರಲಿದ್ದು, ರಾತ್ರಿ 9:30ಕ್ಕೆ ಭಕ್ತರು ದಶಕಗಳಿಂದ ಕಾಯುತ್ತಿದ್ದ ಶ್ರೀದೇವಿ ಅಮ್ಮನವರು ಹಾಗೂ ಶ್ರೀ ಸ್ವಾಮಿಯವರ ಭವ್ಯ ಪ್ರಥಮೋತ್ಸವ ಸಡಗರದಿಂದ ಜರುಗಲಿದೆ.

ಜೂನ್ 29 (ಸೋಮವಾರ): ರಾತ್ರಿ ಶ್ರೀದೇವಿ ಅಮ್ಮನವರಿಗೆ ನಯನಮನೋಹರ ಅಶ್ವವಾಹನೋತ್ಸವ ಹಾಗೂ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯವರಿಗೆ ವೃಷಭ ವಾಹನೋತ್ಸವ ನಡೆಯಲಿದೆ.

ಜೂನ್ 30 (ಮಂಗಳವಾರ): ದೇವತೆಗಳಿಗೆ ಗಂಗಾಸ್ನಾನ ಮತ್ತು ಮುಡಿಯು ಸೇವೆ ನಡೆಯಲಿದೆ. ಮಧ್ಯಾಹ್ನ 1:30ಕ್ಕೆ ರೋಮಾಂಚನಕಾರಿ ಅಗ್ನಿಕುಂಡೋತ್ಸವ ಜರುಗಲಿದೆ. ಅಂದು ರಾತ್ರಿ 10:30ಕ್ಕೆ ಚಿಕ್ಕನಾಯಕನಹಳ್ಳಿ ಹಾಗೂ ಹಿಂಡಿಸ್ಕೆರೆ ದೇವಾಂಗ ಮಂಡಳಿಯವರಿಂದ "ವೀರಗಾರಿಕೆ ಸೇವೆ" ಸಮರ್ಪಣೆಯಾಗಲಿದ್ದು, ರಾತ್ರಿ 11:30ಕ್ಕೆ ಚಿಕ್ಕ ರಥೋತ್ಸವ ಜರುಗಲಿದೆ.

ಜುಲೈ 1 (ಬುಧವಾರ): ಮಧ್ಯರಾತ್ರಿ 2:30ಕ್ಕೆ ಚಿಕ್ಕನಾಯಕನಹಳ್ಳಿ ಮಂಡಳಿಯಿಂದ ಬಲಿಶಾಂತಿ ಸೇವೆ, ಮುಂಜಾನೆ 4:30ಕ್ಕೆ ಹಿಂಡಿಸ್ಕೆರೆ ಮಂಡಳಿಯಿಂದ "ಗಂಡುಕತ್ತರಿ ಸೇವೆ" ಹಾಗೂ ಮುಂಜಾನೆ 5:30ಕ್ಕೆ ಚಿಕ್ಕನಾಯಕನಹಳ್ಳಿ ದೇವಾಂಗ ಮಂಡಳಿಯವರಿಂದ "ಶಸ್ತ್ರಮಂಗಲಾರತಿ ಸೇವೆ" ನೆರವೇರಲಿದೆ. ಅಂದು ದಿನವಿಡೀ ಉಭಯ ಮಂಡಳಿಗಳಿಂದ ಭವ್ಯ ವೀರಗಾರಿಕೆ ಸೇವೆ ಮುಂದುವರಿಯಲಿದೆ.

ಜುಲೈ 2 (ಗುರುವಾರ): ದೇವ ದೇವತೆಯರಿಗೆ ಮಹಾರಥೋತ್ಸವ ಹಾಗೂ ಕಣ್ಣುಮನ ಸೆಳೆಯುವ ಉಯ್ಯಾಲೆ ಉತ್ಸವ ನಡೆಯಲಿದ್ದು, ಇದರೊಂದಿಗೆ 20 ವರ್ಷಗಳ ನಂತರದ ಈ ಐತಿಹಾಸಿಕ ಮಹೋತ್ಸವವು ಸಂಪನ್ನಗೊಳ್ಳಲಿದೆ.

ನವವಧುವಿನಂತೆ ಕಂಗೊಳಿಸುತ್ತಿರುವ ಸಾಸಲು ಗ್ರಾಮ20 ವರ್ಷಗಳ ಸುದೀರ್ಘ ವಿರಾಮದ ನಂತರ ಈ ಜಂಟಿ ಜಾತ್ರೆ ನಡೆಯುತ್ತಿರುವುದರಿಂದ ಸಾಸಲು ಗ್ರಾಮವನ್ನು ತಳಿರು ತೋರಣ, ವಿದ್ಯುತ್ ದೀಪಗಳಿಂದ ನವವಧುವಿನಂತೆ ಶೃಂಗರಿಸಲಾಗುತ್ತಿದೆ. ದೂರದ ಊರುಗಳಿಂದ ಬರುವ ಭಕ್ತಾದಿಗಳಿಗೆ ಕುಡಿಯುವ ನೀರು, ನೆರಳು ಹಾಗೂ ನಿರಂತರ ದಾಸೋಹದ (ಅನ್ನದಾನ) ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತಿದೆ.

ಜಾತಿ–ಮತ ಭೇದ ಮರೆತು ಇಡೀ ತಾಲ್ಲೂಕಿನ ಸಾರ್ವಜನಿಕರು ಹಾಗೂ ಭಕ್ತಾದಿಗಳು ಸಾಗರೋಪಾದಿಯಲ್ಲಿ ಆಗಮಿಸಿ ತಾಯಿ ಬನಶಂಕರಿ ಹಾಗೂ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಸಾಸಲು ಗ್ರಾಮಸ್ಥರು ಹಾಗೂ ಚಿಕ್ಕನಾಯಕನಹಳ್ಳಿ–ಹಿಂಡಿಸ್ಕೆರೆ ದೇವಾಂಗ ಮಂಡಳಿಯವರು ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

18 ಸಾವಿರಕ್ಕೂ ಹೆಚ್ಚು ಇ–ಖಾತಾ ವಿತರಣೆ : ಕೆ.ಶೇಷಾದ್ರಿ
ಕಳೆದ 20 ತಿಂಗಳಲ್ಲಿ 27 ಇ–ಖಾತಾ ಯಶಸ್ವಿ ಆಂದೋಲನ



ರಾಮನಗರ : ಕಳೆದ 20 ತಿಂಗಳಿಂದ 27 ಖಾತೆ ಅಭಿಯಾನಗಳ ಮೂಲಕ ರಾಮನಗರ ನಗರಸಭೆಯಿಂದ ಆಸ್ತಿ ಮಾಲೀಕರಿಗೆ 18 ಸಾವಿರಕ್ಕೂ ಆಸ್ತಿ ಇ–ಖಾತೆ ದಾಖಲೆಗಳನ್ನು ವಿತರಣೆ ಮಾಡಲಾಗಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಶಶಿ ಅವರು ತಿಳಿಸಿದರು.

ಗುರುವಾರ ನಗರಸಭೆ ಕಚೇರಿ ಸಭಾಂಗಣದಲ್ಲಿ ನಡೆದ 27ನೇ ಇ–ಖಾತಾ ಅಭಿಯಾನದಲ್ಲಿ ಮಾತನಾಡಿದ ಅವರು, ಜನರ ಆಸ್ತಿ ಪಾಸ್ತಿಗಳಿಗೆ ಇ–ಖಾತೆ ಎಂಬುದು ಒಂದು ಪ್ರಮುಖ ದಾಖಲೆ. ಇದನ್ನು ಪಡೆಯಲು ಆಸ್ತಿ ಮಾಲೀಕರು ನಾನಾ ಸಮಸ್ಯೆಗಳನ್ನು ಎದುರಿಸಿ, ಹರಸಾಹಸ ಪಡುತ್ತಿದ್ದರು. ಇದನ್ನು ಮನಗಂಡು ನಗರಸಭೆ ಕಳೆದ 20 ತಿಂಗಳಿನಿಂದ ವಾರ್ಡ್‌ವಾರು ಖಾತೆ ಅಭಿಯಾನಗಳನ್ನು ಹಮ್ಮಿಕೊಂಡಿತ್ತು. ಅಲ್ಲದೆ ನಗರಸಭೆಯಲ್ಲೂ ಆಗ್ಗಾಗ್ಗೆ ಅಭಿಯಾನಗಳನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ಸಾರ್ವಜನಿಕರಿಂದಲೂ ಅಭಿಯಾನಕ್ಕೆ ಉತ್ತಮ ಸ್ಪಂದನೆ ದೊರೆತ ಪರಿಣಾಮ ಈವರೆಗೆ 18 ಸಾವಿರಕ್ಕೂ ಆಸ್ತಿ ಇ–ಖಾತೆ ದಾಖಲೆಗಳನ್ನು ವಿತರಣೆ ಮಾಡಲಾಗಿದೆ. ಇ–ಖಾತೆ ಪಡೆಯಲು ಜನರಿಗೆ ಯಾವುದೇ ಕಿರಿಕಿರಿ ಇಲ್ಲದಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು, ನಿಗದಿತ ಕಾಲಮಿತಿಯಲ್ಲಿ ದಾಖಲೆಗಳನ್ನು ಒದಗಿಸುತ್ತಿದ್ದೇವೆ ಎಂದು ಹೇಳಿದರು. 18 18 ಸಾವಿರಕ್ಕೂ ಹೆಚ್ಚು ಇ–ಖಾತಾ ವಿತರಣೆ : ಕೆ.ಶೇಷಾದ್ರಿಕಳೆದ 20 ತಿಂಗಳಲ್ಲಿ 27 ಇ–ಖಾತಾ ಯಶಸ್ವಿ ಆಂದೋಲನ ಸಾವಿರಕ್ಕೂ ಹೆಚ್ಚು ಇ–ಖಾತಾ ವಿತರಣೆ : ಕೆ.ಶೇಷಾದ್ರಿ

ಕಳೆದ 20 ತಿಂಗಳಲ್ಲಿ 27 ಇ–ಖಾತಾ ಯಶಸ್ವಿ ಆಂದೋಲನನಮ್ಮ ಅಧಿಕಾರಿ, ಸಿಬ್ಬಂದಿಗಳು ಎಸ್‌ಐಆರ್, ಜನಗಣತಿ ಕಾರ್ಯಕ್ಕೆ ನಿಯೋಜನೆಗೊಂಡಿದ್ದರು. ಸರ್ವರ್ ಸಮಸ್ಯೆ ಹೀಗೆ ತಾಂತ್ರಿಕ ಕಾರಣಗಳಿಂದ ಕಳೆದ ಮೂರು ತಿಂಗಳಿಂದ ಅಭಿಯಾನದ ವೇಗ ಕುಂಠಿತಗೊಂಡಿತ್ತಾದರೂ, ಈಗ ಅದಕ್ಕೆ ಮತ್ತೆ ವೇಗ ನೀಡಲಾಗಿದೆ. ಸಾರ್ವಜನಿಕರು ಮಧ್ಯವರ್ತಿಗಳನ್ನು ಸಂಪರ್ಕಿಸದೆ ನೇರವಾಗಿ ಖಾತೆಗಳನ್ನು ಪಡೆದುಕೊಳ್ಳಿ ಎಂದರು.

ಈ ವೇಳೆ ಆಯುಕ್ತರಾದ ಡಾ.ಜಯಣ್ಣ, ಸದಸ್ಯರಾದ ಮಂಜುನಾಥ್, ಮೋಯಿನ್ ಖುರೇಷಿ, ಕಂದಾಯಾಕಾರಿ ಕಿರಣ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿದ್ಯಾವಂತರು ಎಲ್ಲೆಂದರಲ್ಲಿ ಬೇಕಾಬಿಟ್ಟಿ ಕಸ ಬಿಸಾಡ್ತಾರೆ

ರಾಮನಗರದಲ್ಲಿ ತಲೆದೋರುತ್ತಿದ್ದ ಕಸ ವಿಲೇವಾರಿ ಸಮಸ್ಯೆ ಗಂಭೀರವಾಗದಂತೆ ಹಲವು ಪರಿಣಾಮಕಾರಿ ಕ್ರಮ ವಹಿಸಲಾಗಿದೆ. ಪೌರಕಾರ್ಮಿಕರ ಕಾರ್ಯದಕ್ಷತೆ ಹೆಚ್ಚಳ ಮಾಡುವುದು, ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿರುವುದು, ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ, 53 ಸಿಸಿ ಕ್ಯಾಮೆರಾಗಳನ್ನು ಅಳವಡಿಸಿರುವುದು ಹೀಗೆ ಅನೇಕ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ನಗರಸಭಾಧ್ಯಕ್ಷ ಕೆ. ಶೇಷಾದ್ರಿ (ಶಶಿ) ತಿಳಿಸಿದರು.

ಕಸ ವಿಲೇವಾರಿ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲೆಂದೇ ರೆಮ್ಯುನರೇಟರ್‌ಗಳನ್ನು ನೇಮಕ ಮಾಡಿದ್ದೇವೆ.ಆದರೆ ಎಲ್ಲೆಂದರಲ್ಲಿ ಕಸ ಎಸೆಯುವ ಪ್ರವೃತ್ತಿ ನಿರೀಕ್ಷಿತ ಮಟ್ಟದಲ್ಲಿ ಕಡಿಮೆ ಆಗಿಲ್ಲ. ವಿದ್ಯಾವಂತರೇ ಎಲ್ಲೆಂದರಲ್ಲಿ ರಾತ್ರಿ ವೇಳೆ ಹೆಲ್ಮೆಟ್ ಧರಿಸಿಕೊಂಡು ಬಂದು ಕಸ ಎಸೆದು ಹೋಗುತ್ತಿದ್ದಾರೆ. ಒಂದು ಬ್ಲಾಕ್ ಸ್ಪಾಟ್ ಮುಚ್ಚಿದರೆ ಮತ್ತೊಂದು ತಲೆ ಎತ್ತುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ. ಸಾರ್ವಜನಿಕರು ವಿಂಗಡಣೆ ಮಾಡಿದ ಕಸವನ್ನು ನಗರಸಭೆ ಆಟೋಗಳಿಗೆ ನೀಡುವ ಅಭ್ಯಾಸವನ್ನು ಕ್ರಮೇಣ ರೂಢಿಸಿಕೊಳ್ಳುತ್ತಿದ್ದಾರೆ. ಇದರ ಪ್ರಮಾಣ ಮತ್ತಷ್ಟು ಹೆಚ್ಚಾಗಬೇಕು. ಹರೀಸಂದ್ರದ ಘನ ತ್ಯಾಜ್ಯ ಸಂಸ್ಕರಣೆ, ವಿಲೇವಾರಿ ಘಟಕ ಮುಂದಿನ ದಿನಗಳಲ್ಲಿ ಚಾಲನೆ ಪಡೆಯಲಿದೆ. ಅಲ್ಲಿಗೆ ವಿಂಗಡಣೆಯಾದ ಕಸವನ್ನು ಮಾತ್ರ ಕಳಿಸಬೇಕಾಗಿದೆ. ಎಲ್ಲರೂ ತಪ್ಪದೆ ಕಸವನ್ನು ವಿಂಗಡಣೆ ಮಾಡಿ ಕೊಡಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ದಂಡ ಪ್ರಯೋಗ ಮಾಡಲಾಗುವುದು. ಕಸ ವಿಲೇವಾರಿ ಸಮಸ್ಯೆ

ಉಪ ನಿರ್ದೇಶಕ ಶಿವಕುಮಾರ್ ಅಮಾನತಿಗೆ ಎಸ್‌ಎಸ್‌ಡಿ ಅಗ್ರಹ



ರಾಮನಗರ: ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಎಂ.ವಿ.ಶಿವಕುಮಾರ್ ಜಿಲ್ಲಾಡಳಿತ ಮತ್ತು ದಲಿತ ಸಮುದಾಯದ ಮಧ್ಯೆ ಕಂದಕ ಸೃಷ್ಟಿಸಿರುವ, ಜತೆಗೆ ಹಾಸ್ಟೆಲ್ ಕಾಮಗಾರಿಯಲ್ಲಿ ಅವ್ಯವಹಾರ ನಡೆಸಿದ್ದಾರೆಂದು ಆರೋಪಿಸಿ ಸಮತಾ ಸೈನಿಕ ದಳ ಹಾಗೂ ದಲಿತ ಮುಖಂಡರು ತಮಟೆ ಚಳವಳಿ ನಡೆಸಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾ ಪಂಚಾಯತ್ ಭವನದ ಎದುರು ಗುರುವಾರ ಜಮಾವಣೆಗೊಂಡ ಸಮತಾ ಸೈನಿಕ ದಳದ ಕಾರ್ಯಕರ್ತರು, ಪದಾಧಿಕಾರಿಗಳು ಹಾಗೂ ದಲಿತ ಮುಖಂಡರು ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಅವರ ಅಮಾನತಿಗೆ ಆಗ್ರಹಿಸಿದರು.

ಉದ್ದೇಶಪೂರ್ವಕವಾಗಿ ಬಾಬು ಜಗಜೀವನ್ ರಾಮ್ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಣೆಗೆ ಭಾಗವಹಿಸದೆ 25 ದಿನ ರಜೆ ಮೇಲೆ ತೆರಳಿದ್ದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಎಂ ವಿ ಶಿವಕುಮಾರ್ ಅವರ ದಲಿತ ವಿರೋಧಿ ನೀತಿಯನ್ನು ಪ್ರತಿಭಟನಾಕಾರರು ಖಂಡಿಸಿದರು. ಇವರ ಅವಧಿಯಲ್ಲಿ ನಡೆದಿರುವ ಹಾಸ್ಟೆಲ್ ನವೀಕರಣ ಕಾಮಗಾರಿಯಲ್ಲಿ ಅವ್ಯವಹಾರ, ಕಳಪೆ ಕಾಮಗಾರಿ ಹಾಗೂ ತಮ್ಮ ಸ್ನೇಹಿತನ ಎಂಟರ್ ಪ್ರೈಸಸ್ ಮೂಲಕ ಕಾಮಗಾರಿ ನಡೆಸದೆ ಬಿಲ್ ಮಾಡಿಕೊಂಡಿದ್ದು, ಕೂಡಲೇ ಇವರನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸಂಘಟನೆಯ ಯುವ ಘಟಕದ ರಾಜ್ಯಾಧ್ಯಕ್ಷ ಡಾ.ಜಿ.ಗೋವಿಂದಯ್ಯ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್ ಅವರು ಜಿಲ್ಲೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಾಗಿನಿಂದಲೂ, ಕೆ.ಸಿ.ಎಸ್.ಆರ್ ನಿಯಮಾವಳಿ ಅನ್ವಯ ಹಾಗೂ ಸಂವಿಧಾನ ಬದ್ಧವಾಗಿ ಇಲಾಖಾ ಕಾರ್ಯಕ್ರಮಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸುವ ಬದಲಿಗೆ ಅನಿಯಮಿತ ಅಕ್ರಮ ಮತ್ತು ಭ್ರಷ್ಟಾಚಾರಗಳನ್ನೇ ನಡೆಸಿಕೊಳ್ಳುತ್ತಿದ್ದಾರೆ. ಎರಡನೇ ಬಾರಿಗೆ ಜಿಲ್ಲೆಗೆ ಉಪನಿರ್ದೇಶಕರಾಗಿ ಬಂದು ತನ್ನ ಜಾತಿವಾದಿತನದಿಂದ ದಲಿತ ಸಮುದಾಯವನ್ನು ತನ್ನ ನೀತಿಯಿಂದ ಆಡಳಿತದಲ್ಲಿ ದರ್ಪ ತೋರಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಡಳಿತ ಮತ್ತು ದಲಿತ ಸಮುದಾಯದ ಮಧ್ಯೆ ಕಂದಕ ಸೃಷ್ಟಿಸಿ ಉದ್ದೇಶಪೂರ್ವಕವಾಗಿ ಬಾಬು ಜಗಜೀವನ್ ರಾಮ್ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಣೆಗೆ ಭಾಗವಹಿಸದೆ 25 ದಿನ ರಜೆ ಮೇಲೆ ತೆರಳಿದ್ದರು. ಜಯಂತಿಗಳ ಆಚರಣೆ ನಿರ್ಲಕ್ಷ್ಯ ಮಾಡುವ ಅಧಿಕಾರಿ, ಕಳೆದ ಮಾರ್ಚ್ 30ರವರೆಗೆ ಕಚೇರಿಯಲ್ಲಿದ್ದು, ವರ್ಷಾಂತ್ಯದ ಅನುದಾನದ ಬಿಲ್‌ಗಳನ್ನು ವಿಲೇವಾರಿ ಮಾಡಿಕೊಂಡಿದ್ದಾರೆ. ಆದರೆ, ಏಪ್ರಿಲ್ 5ರ ಬಾಬು ಜಗಜೀವನ್ ರಾಮ್ ಜಯಂತಿ ಹಾಗೂ ಏಪ್ರಿಲ್ 14ರ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯಂತಹ ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ರಜೆ ಮೇಲೆ ತೆರಳಿ, ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ಕಿಡಿಕಾರಿದರು.

ಕಳೆದ ಎರಡು ವರ್ಷಗಳಿಂದಲೂ ಜಯಂತಿಗಳ ಆಚರಣೆಗೆ ಸಂಬಂಧಿಸಿದಂತೆ ನಾಲ್ಕು ತಾಲ್ಲೂಕುಗಳಿಗೆ ಯಾವುದೇ ರೀತಿಯ ಹಣ ನೀಡದೇ, ಜಯಂತಿ ಆಚರಣೆ ಸಂಬಂಧ ಸುಳ್ಳು ಬಿಲ್ಲುಗಳನ್ನು ಇವರ ಆಪ್ತರ ಎಂಟರ್ ಪ್ರೈಸಸ್ ಹೆಸರಿನಲ್ಲಿ ಹಣ ತೆಗೆದುಕೊಂಡಿದ್ದಾರೆ. ಸರ್ಕಾರದಿಂದ ಇಂತಹುದೇ ಕಾರ್ಯಕ್ರಮಗಳ ಅನುಷ್ಠಾನಕ್ಕೆಂದು ಬಿಡುಗಡೆಯಾದ ಅನುದಾನವನ್ನು ಈ ಅಧಿಕಾರಿಯು ಇವರಿಗೆ ಬೇಕಾದವರ ಇಷ್ಟಕ್ಕೆ ತಕ್ಕಂತೆ ಇನ್ನಿತರೇ ಕೆಲಸ ಮತ್ತು ಕಾಮಗಾರಿಗಳಿಗೆ ಬಳಸಿಕೊಂಡು ಕಾನೂನು ಧಿಕ್ಕರಿಸಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಅಧಿಕಾರಿಯು ಸರ್ಕಾರದ, ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಕ್ಕೆಂದು ಹೊರಗುತ್ತಿಗೆ ಮೂಲಕ ವಾಹನವನ್ನು ಪಡೆದು, ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬದಲಾಗಿ, ವಾಹನವನ್ನು ಈ ಅಧಿಕಾರಿಯು ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿರುವ ಮನೆಗೆ ಹೋಗಿಬರಲು ಪ್ರತಿದಿನ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸಮತಾ ಸೈನಿಕ ದಳ ಸಂಘಟನೆ ಜಿಲ್ಲಾಧ್ಯಕ್ಷ ಸುರೇಶ್, ದಮ್ಮದೀವಿಗೆ ಮಲ್ಲಿಕಾರ್ಜುನ್ ದಲಿತ ಮುಖಂಡರಾದ ಕಿರಣ್ ಸಾಗರ್, ಗುಡ್ಡೆ ವೆಂಕಟೇಶ್,ನವೀನ್, ಪುನೀತ್, ಕೀರ್ತಿ, ನರಸಿಂಹಯ್ಯ, ವರದರಾಜು, ಅಗಾ, ಗಿರೀಶ್, ಅಪ್ಪಕೆರೆ ಶ್ರೀನಿವಾಸ್, ಸರಸ್ವತಿ, ಪೂರ್ಣಿಮಾ ಮತ್ತಿತರರು ಇದ್ದರು.

ಅಕ್ಷರಾಭ್ಯಾಸ ಹಾಗೂ ಅಧಿಕಾರ ಪ್ರಧಾನ ಸಮಾರಂಭ ಅರ್ಥಪೂರ್ಣ



ಮಧುಗಿರಿ: ಈ ಶೈಕ್ಷಣಿಕ ವರ್ಷದಿಂದ ಐಐಟಿ ಮದ್ರಾಸ್ ಸಹಭಾಗಿತ್ವದಲ್ಲಿ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸು ನನಸು ಮಾಡುವುದು ಸಂಸ್ಥೆಯ ಪ್ರಮುಖ ಗುರಿಯಾಗಿದೆ ಎಂದು ಶಾಲೆಯ ಅಧ್ಯಕ್ಷ ಹನುಮಂತರಾಜು ತಿಳಿಸಿದರು.

ತಾಲೂಕಿನ ದೊಡ್ಡೇರಿ ಹೋಬಳಿಯ ಬಡವನಹಳ್ಳಿ ಶ್ರೀರಂಗ ವಿದ್ಯಾ ಮಂದಿರ ಶಾಲೆಯಲ್ಲಿ ಅಕ್ಷರಾಭ್ಯಾಸ ಹಾಗೂ ಅಧಿಕಾರ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಪೂರ್ವ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರ ಸಮ್ಮುಖದಲ್ಲಿ ಸನಾತನ ಸಂಪ್ರದಾಯದಂತೆ ಅಕ್ಷರಾಭ್ಯಾಸ ಹಮ್ಮಿಕೊಳ್ಳಲಾಗಿದೆ. ವಿಘ್ನೇಶ್ವರನ ಅನುಗ್ರಹದೊಂದಿಗೆ ಪುಟಾಣಿ ಮಕ್ಕಳಿಗೆ ವಿದ್ಯಾರಂಭ ಮಾಡಲಾಗಿದೆ ಎಂದರು.

ಶಾಲೆಯ ಗೌರವ ಅಧ್ಯಕ್ಷ ಶ್ರೀ ಶಿವಕುಮಾರ್ ಮಾತನಾಡಿ, ಶಾಲೆಯ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪೋಷಕರ ಸಹಕಾರ ಅಗತ್ಯ ಎಂದರು.

ಅಣುಕು ಸಂಸತ್ ಮಾದರಿಯಲ್ಲಿ ಶಾಲಾ ಹಂತದ ಚುನಾವಣೆ ನಡೆಸಿ, ವಿದ್ಯಾರ್ಥಿ ಸಂಸತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು, ಶಿಸ್ತು ಸಮಿತಿ, ಸಾಂಸ್ಕೃತಿಕ ಸಮಿತಿ, ಕ್ರೀಡಾ ಹಾಗೂ ಶೈಕ್ಷಣಿಕ ಸಮಿತಿಗಳ ಅಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಾಲೆಯ ಕಾರ್ಯದರ್ಶಿ ಮಮತಾ ಟಿ.ಆರ್. ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಅಬ್ದುಲ್ ಅಜೀಜ್ ಪ್ರಮಾಣ ವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಖಜಾಂಚಿ ಮಂಜುನಾಥ್, ನಿರ್ದೇಶಕರಾದ ಶ್ರೀಕುಮಾರ್, ರಂಗನಾಥ್, ಮುಖ್ಯ ಶಿಕ್ಷಕಿ ಸಫಿನಾ ಹಾಜರಿದ್ದರು.

ಮಧುಗಿರಿ: ಓಮ್ನಿ ವ್ಯಾನ್ ಡಿಕ್ಕಿ: ವ್ಯಕ್ತಿ ಸಾವು

ಮಧುಗಿರಿ: ಓಮ್ನಿ ವ್ಯಾನ್‌ವೊಂದು ವ್ಯಕ್ತಿಯೊಬ್ಬರಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಆತ ಮೃತಪಟ್ಟಿರುವ ಘಟನೆ ಮಧುಗಿರಿ ತಾಲ್ಲೂಕಿನ ಹೊಸಕೆರೆ ಗ್ರಾಮದಲ್ಲಿ ನಡೆದಿದೆ. ಮೃತರನ್ನು ರಾಜಣ್ಣ (56) ಎಂದು ಗುರುತಿಸಲಾಗಿದೆ.

ಕೆಎ43 ಎಂ 7885 ರಾಜಣ್ಣ ಅವರು ಹೊಸಕೆರೆ ಗ್ರಾಮದ ಬಸ್ ನಿಲ್ದಾಣದ ಬಳಿ ಇರುವ ಶನಿದೇವರ ದರ್ಶನ ಮಾಡಿಕೊಂಡು ಹಿಂದಿರುಗುವ ಸಮಯದಲ್ಲಿ ಪಾವಗಡ ಕಡೆಯಿಂದ ಮಧುಗಿರಿ ಕಡೆಗೆ ಬಂದ ಓ ಕಾರಿನ ಚಾಲಕ ತನ್ನ ವಾಹನವನ್ನು ಅಜಾರುಕತೆಯಿಂದ ಓಡಿಸಿಕೊಂಡು ಬಂದು ರಾಜಣ್ಣ ಅವರಿಗೆ ಡಿಕ್ಕಿ ಹೊಡೆದರು. ಇದರಿಂದ ತೀವ್ರ ಪೆಟ್ಟಾದ ಅವರನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಕೊನೆಯುಸಿರೆಳೆದಿದ್ದಾರೆ. ಈ ಬಗ್ಗೆ ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕಸ್ಮಿಕ ಬೆಂಕಿ: ಮನೆ ಸುಟ್ಟು ಕರಕಲಾಗಿದೆ: ಬೆಂಕಿ ಆಕಸ್ಮಿಕದಿಂದ ಗುಡಿಸಿಲಿನ ಮನೆಯಿಂದು ಸುಟ್ಟು ಹೋದ ಘಟನೆ ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಹೋಬಳಿಗೆ ಸೇರಿದ ಚಿನ್ನೇನಹಳ್ಳಿಯಲ್ಲಿ ನಡೆದಿದೆ. ಲಕ್ಷ್ಮಣಪ್ಪ ಎಂಬುವರಿಗೆ ಸೇರಿದ ಈ ಈ ಮನೆಯಲ್ಲಿ ಜು.22 ರ ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಈ ಘಟನೆ ನಡೆದಿದ್ದು, ಗುಡಿಸಿಲಿನಲ್ಲಿ ಸಂಗ್ರಹಿಸಿಟ್ಟಿದ್ದ ಗುಜ್ಜರಿ ವಸ್ತುಗಳೂ ಸೇರಿದಂತೆ ಮನೆಯಲ್ಲಿದ್ದ ವಸ್ತುಗಳೆಲ್ಲಾ ಬೆಂಕಿಗಾಹುತಿಯಾಗಿವೆ. ಮಧುಗಿರಿಯ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಆಗಬಹುದಾದ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ.

ಜೂಜುಕೋರರ ಬಂಧನ:–ಮಧುಗಿರಿ ತಾಲ್ಲೂಕಿನ ಐ.ಡಿ.ಹಳ್ಳಿ ಹೋಬಳಿಗೆ ಸೇರಿದ ಹಳೇಇಟಕಲೋಟಿ ಗ್ರಾಮದ ಕೆರೆಯಂಗಳದಲ್ಲಿ ಜೂಜಾಟ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಮಿಡಿಗೇಶಿ ಪೊಲೀಸ್ ಠಾಣೆಯ ಪಿಎಸ್‌ಐ ರವೀಂದ್ರ ಮತ್ತುವರ ತಂಡ ದಾಳಿ ಮಾಡಿ ಅವರಿಂದ 10,300 ರೂ. ಹಾಗು 6 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಬಹುತೇಕರು ಆಂಧ್ರ ರಾಜ್ಯದ ಹಿಂದೂಪುರ ತಾಲ್ಲೂಕಿನವರು ಎಂದು ತಿಳಿದು ಬಂದಿದೆ.

ತುಮಕೂರು ಜಿಲ್ಲಾ ಘಟಕದ ಪ್ರಥಮ ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸಭೆ



ತುಮಕೂರು:ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತುಮಕೂರು ಜಿಲ್ಲಾ ಘಟಕದ ಪ್ರಥಮ ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸಭೆಯು ಜಿಲ್ಲಾಧ್ಯಕ್ಷರಾದ ಪಿ.ಜಿ.ತಿಮ್ಮೇಗೌಡ ರವರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ನಡೆಯಿತು.

ಸಭೆಯಲ್ಲಿ ರಾಜ್ಯಾಧ್ಯಕ್ಷರಾದ ಚಂದ್ರಶೇಖರ ನುಗ್ಲಿ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ನಡೆದ ನಿರ್ಣಯಗಳ ಬಗ್ಗೆ ಚರ್ಚಿಸಲಾಯಿತು.

ಈ ಸಭೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಶಿಕ್ಷಕರು ಎದುರಿಸುತ್ತಿರುವ ಅಕ್ಷರದಾಸೋಹಕ್ಕೆ ಸಂಬಂಧಿಸಿದ ಸಮಸ್ಯೆಗಳು, ಕಾಮ್ಸ್ ಸಮಸ್ಯೆಗಳು,ಬಿ. ಎಲ್.ಓ.ಸಮಸ್ಯೆಗಳು,ಗಣತಿ ಕಾರ್ಯಗಳಿಗೆ ಸಿಗಬೇಕಾದ ಗಳಿಕೆ ರಜೆಗಳ ಬಗ್ಗೆ,ಮೆಡಿಕಲ್ ಬಿಲ್ಲುಗಳ ಮರುಪಾವತಿ ವೆಚ್ಚದ ಬಿಲ್ಲುಗಳ ಅನುದಾನಗಳ ಬಗ್ಗೆ ಸುಧೀರ್ಘ ಚರ್ಚೆ ನಡೆಸಲಾಯಿತು. ಶನಿವಾರದ ಶಾಲಾ ವೇಳಾಪಟ್ಟಿಯ ಬಗ್ಗೆ ಮಾನ್ಯ ಉಪ ನಿರ್ದೇಶಕರಿಗೆ ಮನವಿ ಹಾಗೂ ಮನವರಿಕೆ ಮಾಡಿಕೊಡುವ ಬಗ್ಗೆ ಸಭೆಯಲ್ಲಿ ಒಮ್ಮತದ ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮರಳುಸಿದ್ದಯ್ಯ, ಜಿಲ್ಲಾ ಉಪಾಧ್ಯಕ್ಷರುಗಳಾದ ಶ್ರೀಮತಿ ಕೆ.ಎ.ಮಂಜುಳಾ, ಆರ್.ಪರಮೇಶ್, ಜಿಲ್ಲಾ ಖಜಾಂಚಿಗಳಾದ ಎ.ಬಿ.ಮಂಜುನಾಥ್, ಜಿಲ್ಲಾ ಸಹಕಾರ್ಯದರ್ಶಿಗಳಾದ ಶ್ರೀಮತಿ ಕೋಮಲ, ಹಾಗೂ ಹಿರಿಯರಾದ ಷಣ್ಮುಖಪ್ಪ ಅವರುಗಳು ಉಪಸ್ಥಿತರಿದ್ದರು, ಶಿಕ್ಷಕರ ಆಗು, ಹೋಗುಗಳ ಕುರಿತು ಚರ್ಚೆ ನಡೆಸಿದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA.
CONTACT : 9901010109 GMAIL: suryapragathi2021@gmail.com.